MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

YUVA MARGA NEWS PAPER
VOICE OF THE NATION

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್
Cell : 9743497111

YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ
Cell : 9743496111

ಸಂಪುಟ: 04 | ಸಂಚಿಕೆ: 287 | ಭಾನುವಾರ : 31-08-2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 04 | ISSUE: 287 | SUNDAY : 31-08-2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

## ಕಾಂಗ್ರೆಸ್ ಸರ್ಕಾರದ ವಿರುದ್ಧ ತೀವ್ರ ಅಶೋಕ್ ವಾಗ್ದಾಳಿ



**ಬೆಂಗಳೂರು,ಸೆ.30–** ಕೇಂದ್ರ ಸರ್ಕಾರ ಸರಕು ಸೇವಾ ತೆರಿಗೆ( ಜಿಎಸ್‌ಟಿ) ದರವನ್ನು ಸರಳೀಕರಣಗೊಳಿಸಲು ಹೊರಟಿದ್ದರೆ, ರಾಜ್ಯದ ಆದಾಯ ಖೋತಾವಾಗುತ್ತದೆ ಎಂದು ಕ್ಯಾತೆ ತೆಗೆದು ಜನಪರವಾದ ಜಿಎಸ್ಟಿ ಸುಧಾರಣೆಗೆ ಕಲ್ಲು ಹಾಕಲು ಜನವಿರೋಧಿ ಕಾಂಗ್ರೆಸ್ ಸರ್ಕಾರ ಹೊರಟಿದೆ ಎಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ಈ ಕುರಿತು ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವ ಅವರು, ಆಹಾರ ಪದಾರ್ಥಗಳು, ಜವಳಿ ಉತ್ಪನ್ನಗಳು, ಟಿವಿ, ರೆಫ್ರಿಜರೇಟರ್, ಆರೋಗ್ಯ ವಿಮೆ, ಸಿಮೆಂಟ್ ಸೇರಿದಂತೆ ಜನಸಾಮಾನ್ಯರು ಬಳಸುವ ಅನೇಕ ದಿನನಿತ್ಯ ಹಾಗೂ ಅಗತ್ಯ ವಸ್ತುಗಳ ಬೆಲೆಗಳನ್ನು ಕಡಿಮೆ ಮಾಡುವ ಉದ್ದೇಶದಿಂದ ಪ್ರಧಾನಿ ನರೇಂದ್ರಮೋದಿ ನೇತೃತ್ವದ ಕೇಂದ್ರ ಸರ್ಕಾರ ಹೊರಟಿದ್ದರೆ ಅದಕ್ಕೆ ಕಾಂಗ್ರೆಸ್ ಸರ್ಕಾರ ಅಡ್ಡಗಾಲು ಹಾಕಿದೆ ಎಂದು ಕಿಡಿಕಾರಿದ್ದಾರೆ.

ಲೋಕಸಭೆಯ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿಗೆ ಮತ್ತೊಮೆ ಸೆಡ್ಡು ಹೊಡೆದ ಸಿಎಂ ಸಿದ್ದರಾಮಯ್ಯ ಬಣ,ಕೇಂದ್ರ ಸರ್ಕಾರ ಜಿಎಸ್ಟಿ ದರಗಳನ್ನು ಸರಳೀಕರಣ ಮಾಡಲು ಹೊರಟಿದ್ದರೆ ರಾಜ್ಯದ ಆದಾಯ ಖೋತಾ ಆಗುತ್ತದೆ ಎನ್ನುವ ಕ್ಯಾತೆ ತೆಗೆದು ಜನಪರವಾದ ಜಿಎಸ್ಟಿ ಸುಧಾರಣೆಗೆ ಕಲ್ಲು ಹಾಕಲು ಹೊರಟಿದೆ ಈ ಜನವಿರೋಧಿ ಸರ್ಕಾರ ಎಂದು ತಾರಟೆಗೆತೆಗೆದುಕೊಂಡಿದೆ.

ಪ್ರಧಾನಮಂತ್ರಿ ನರೇಂದ್ರಮೋದಿ ಅವರು ತಮ ಸ್ವಾತಂತ್ರ್ಯ ದಿನಾಚರಣೆ ಭಾಷಣದಲ್ಲಿ ದೀಪಾವಳಿ ವೇಳೆಗೆ ಜಿಎಸ್‌ಟಿ ಸುಧಾರಣೆ ಮಾಡುವ ಬಗ್ಗೆ ಘೋಷಣೆ ಮಾಡಿದಾಗ ಇದಕ್ಕೆ ರಾಹುಲ್ ಗಾಂಧಿ ಅವರ ಪ್ರತಿಪಾದನೆಯೇ ಕಾರಣ ಎಂದು ಬೀಗಿ ಪುಕ್ಕಟೆ ಕ್ರೆಡಿಟ್ ಪಡೆದುಕೊಳ್ಳುವ ಪ್ರಯತ್ನ ಮಾಡಿದ್ದ ಕಾಂಗ್ರೆಸ್ ಪಕ್ಷ, ಈಗ ಅದೇ ಜಿಎಸ್‌ಟಿ ಸುಧಾರಣೆ ಬಗ್ಗೆ ಸಿದ್ದರಾಮಯ್ಯ ಸರ್ಕಾರ ಕ್ಯಾತೆ ತೆಗೆಯುತ್ತಿರುವುದು ಆ ಪಕ್ಷದ ದ್ವಂದ್ವ ನೀತಿ, ಆಷಾಢಭೂತಿತನವನ್ನು ಬಯಲು ಮಾಡಿದೆ ಎಂದು ವ್ಯಂಗ್ಯವಾಡಿದ್ದಾರೆ.

ರಾಹುಲ್ ಗಾಂಧಿ ಹೇಳಿದ್ದಕ್ಕೆಲ್ಲ ಉಲ್ಟಾ ಹೊಡೆಯುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಬಣ, ಮಾಜಿ ಸಚಿವ ಕೆ.ಎನ್.ರಾಜಣ್ಣ ಅವರ ಮೂಲಕ ಮತಗಳ್ಳತನ ಆರೋಪವನ್ನು ಠುಸ್ ಮಾಡಿದ ನಂತರ ಈಗ ಜಿಎಸ್‌ಟಿ ಸುಧಾರಣೆ ಬಗ್ಗೆ ರಾಹುಲ್ ಗಾಂಧಿ ಹೇಳಿಕೆಗೆ ತದ್ವಿರುದ್ಧವಾದ ರಾಗ ತೆಗುವ ಮೂಲಕ ಸಚಿವ ಕೃಷ್ಣ ಬೈರೇಗೌಡ ಅವರ ಮೂಲಕ ಮತ್ತೊಮೆ ರಾಹುಲ್ ಗಾಂಧಿ ಅವರಿಗೆ ಸೆಡ್ಡು **2ನೇ ಪುಟಕ್ಕೆ**

### ಉಪ ಲೋಕಾಯುಕ್ತರ ಬಳಿಗೆ ಬಂದ ದೇವದುರ್ಗ ತಾಲೂಕಿನ 1991ರ ಹಳೆಯ ಪ್ರಕರಣ

## ಗಬ್ಬೂರಲ್ಲಿ ನಿವೇಶನಕ್ಕೆ ಹಂಚಿದ ಜಾಗ ಒತ್ತುವರಿ ದೂರು ಸುಮೊಟೊ ಕೇಸ್ ದಾಖಲಿಸಿದ ಉಪ ಲೋಕಾಯುಕ್ತರು

**ಯುವ ಮಾರ್ಗ ಸುದ್ದಿ**

**ರಾಯಚೂರು,ಆ.30–** 1991ರಲ್ಲಿ ಹಂಚಿಕೆ ಮಾಡಿದ ಕರ್ನಾಟಕ ಸರ್ಕಾರದ ಆಶ್ರಯ ಯೋಜನೆಯಡಿಯ ನಿವೇಶನ ಹಕ್ಕುಪತ್ರ ಹಿಡಿದು ರಾಯಚೂರು ಕೃಷಿ ವಿವಿಯ ಆವರಣದ ಸಭಾಂಗಣದಲ್ಲಿ ಉಪ ಲೋಕಾಯುಕ್ತರಿಂದ ನಡೆಯುತ್ತಿದ್ದ ಬಾಕಿ ಪ್ರಕರಣಗಳ ವಿಲೇವಾರಿ ಕಾರ್ಯಕ್ರಮಕ್ಕೆ ಆಗಮಿಸಿದ 66 ಫಲಾನುಭವಿಗಳ ಅಹವಾಲನ್ನು ಉಪ ಲೋಕಾಯುಕ್ತರಾದ ಬಿ ವೀರಪ್ಪ ಅವರು ಆಗಸ್ಟ್ 30ರಂದು ಆಲಿಸಿದರು.

ಮಧ್ಯಾಹ್ನ ಊಟದ ವಿರಾಮದ ನಂತರ ಉಪ ಲೋಕಾಯುಕ್ತರು, ಕಾರ್ಯಕ್ರಮದ ಸ್ಥಳವಾದ ಜಗಜ್ಯೋತಿ ಬಸವೇಶ್ವರ ಸಭಾಂಗಣಕ್ಕೆ ಆಗಮಿಸಿದಾಗ ಸಭಾಂಗಣದ ಬಾಗಿಲ ಬಳಿಯಲ್ಲಿ, ನಿವೇಶನ ಹಕ್ಕು ಪತ್ರಗಳ ಹಿಡಿದು ನಿಂತಿದ್ದ 20ಕ್ಕು ಹೆಚ್ಚು ಮಹಿಳೆಯರನ್ನು ಕಂಡು ಅವರ ಬಳಿ ತೆರಳಿ ಅವರ ಅಹವಾಲು ಆಲಿಸಿದರು.

ನಮ್ಮದು ದೇವದುರ್ಗ ತಾಲೂಕು. ಗಬ್ಬೂರು ಗ್ರಾಮದ ಸರ್ವೆ ನಂ.1007 ರಲ್ಲಿ ರಚಿಸಿರುವ 30*40 ವಿಸ್ತೀರ್ಣಯುಳ್ಳ ನಿವೇಶನಗಳನ್ನು 1991 ನವೆಂಬರನಲ್ಲಿ ಹಂಚಿಕೆ ಮಾಡಿದ್ದಾರೆ. ಆದರೆ ಆ ಜಾಗವನ್ನು ಬೇರೆಯವರು ಒತ್ತುವರಿ ಮಾಡಿದ್ದಾರೆ ಎಂದು ತಮ್ಮ ಅಳಲನ್ನು ತೋಡಿಕೊಂಡರು.



ಇದಕ್ಕೆ ಸ್ಪಂದಿಸಿದ ಉಪ ಲೋಕಾಯುಕ್ತರು, ಸ್ಥಳಕ್ಕೆ ದೇವದುರ್ಗ ತಹಸೀಲ್ದಾರ ಹಾಗೂ ಗಬ್ಬೂರ ಪಿಡಿಓ ಅವರನ್ನು ಕರೆದು ವಿಚಾರಿಸಿದರು. ಈ ಬಗ್ಗೆ ವಿಚಾರಣೆ ನಡೆಸಲು ಸಂಬಂಧಿಸಿದ ಅಧಿಕಾರಿಗಳ ಮೇಲೆ ಸ್ಥಳದಲ್ಲೇ ಸುಮೊಟೊ ಕೇಸ್ ದಾಖಲಿಸಿದರು.

## ನ್ಯಾಯಾಂಗ, ಪತ್ರಿಕಾರಂಗ ಬಲಿಷ್ಟಗೊಳಿಸೋಣ: ಉಪ ಲೋಕಾಯುಕ್ತರಾದ ನ್ಯಾ. ಬಿ.ವೀರಪ್ಪ ಸಲಹೆ





**ಯುವ ಮಾರ್ಗ ಸುದ್ದಿ**

**ರಾಯಚೂರು,ಆ.30–** ಮಾಧ್ಯಮ ರಂಗವು ಈಗ ಮೊದಲಿನಂತಿಲ್ಲ, ಹಿಂದಿನವರಂತೆ ವಕೀಲರಲ್ಲೂ ಕೆಚ್ಚು ರೊಚ್ಚು ಕಾಣುತ್ತಿಲ್ಲ. ನಾಡಿನ ಸುರಕ್ಷತೆ ದೃಷ್ಟಿಯಿಂದ ಪತ್ರಿಕಾರಂಗ ಮತ್ತು ನ್ಯಾಯಾಂಗವನ್ನು ಬಲಿಷ್ಟಗೊಳಿಸೋಣ ಎಂದು ಗೌರವಾನ್ವಿತ ನ್ಯಾಯಮೂರ್ತಿಗಳು ಹಾಗೂ ಕರ್ನಾಟಕ ಉಪ ಲೋಕಾಯುಕ್ತರಾದ ಬಿ.ವೀರಪ್ಪ ಅವರು ಹೇಳಿದರು.

ಆಗಸ್ಟ್ 30ರ ಶನಿವಾರ ನಗರದ ಜಿಲ್ಲಾ ನ್ಯಾಯಾಲಯದ ಸಭಾಂಗಣದಲ್ಲಿ ಕರ್ನಾಟಕ ಲೋಕಾಯುಕ್ತ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ರಾಯಚೂರು ಹಾಗೂ ವಕೀಲರ ಸಂಘದಿಂದ ಹಮ್ಮಿಕೊಂಡಿದ್ದ ಸಾರ್ವಜನಿಕ ಆಡಳಿತ ಮತ್ತು ಲೋಕಾಯುಕ್ತ ಕಾಯ್ದೆ 1988 ರಡಿಯಲ್ಲಿ ವಕೀಲರ ಪಾತ್ರದ ಕುರಿತು ಉಪನ್ಯಾಸ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಸದ್ಯದ ಶಾಸಕಾಂಗ ಮತ್ತು ಕಾರ್ಯಾಂಗದ ವ್ಯವಸ್ಥೆಯ ಬಗ್ಗೆ ಜನರಿಗೆ ವಿಶ್ವಾಸ ಇಲ್ಲದಂತಾಗಿದೆ. ಈ ಬಗ್ಗೆ ವಕೀಲರು ಯೋಚಿಸಬೇಕು. ಜನರಿಗೆ ನ್ಯಾಯಾಂಗದ ಬಗ್ಗೆ ನಂಬಿಕೆ ಬರುವ ಹಾಗೆ ವಕೀಲರು ಕಾರ್ಯಕ್ಷಮತೆ ಹೆಚ್ಚಿಸಿಕೊಳ್ಳಬೇಕು. ಈ ಆಡಳಿತ ಸುಧಾರಣೆಯಲ್ಲಿ ನಮ್ಮ ಪಾತ್ರ ಇದೆ ಎಂದು ವಕೀಲರು ಮತ್ತು ಪತ್ರಕರ್ತರು ಸಹ ಯೋಚಿಸಬೇಕು. ಅನ್ಯಾಯದ ವಿರುದ್ಧ ಸಿಡಿದೇಳಬೇಕು. **(2ನೇ ಘುಟಕ್ಕೆ)**

## ಉಪ ಲೋಕಾಯುಕ್ತ ಬಿ ವೀರಪ್ಪ ಅವರಿಂದ ಮೂರನೇ ದಿನವೂ ಮಿಂಚಿನ ಕಾರ್ಯಾಚರಣೆ

## ಮಿಟ್ಟಿ ಮಲ್ಕಾಪುರ ಕಲ್ಲು ಗಣಿಗಾರಿಕೆ ಪೀಡಿತ ಇಡೀ ಪ್ರದೇಶದ ಮೇಲೆ ಸುಮೋಟೊ ಕೇಸ್ ರಿಜಿಸ್ಟರ್

**ಯುವ ಮಾರ್ಗ ಸುದ್ದಿ**

**ರಾಯಚೂರು,ಆ.30–** ಉಪ ಲೋಕಾಯುಕ್ತರಾದ ನ್ಯಾಯಮೂರ್ತಿ ಬಿ ವೀರಪ್ಪ ಅವರಿಂದ ಮೂರನೇ ದಿನವಾದ ಆಗಸ್ಟ್ 30ರಂದು ಅನಿರೀಕ್ಷಿತ ಭೇಟಿಯ ಮಿಂಚಿನ ಕಾರ್ಯಾಚರಣೆ ನಡೆಯಿತು.

ಚಹಾ ವಿರಾಮದ ನಂತರ ಕೃಷಿ ವಿವಿಯಿಂದ ಬೆಳಗ್ಗೆ 7 ಗಂಟೆಗೆ ನಿರ್ಗಮಿಸಿದ ಉಪ ಲೋಕಾಯುಕ್ತರು, ಸಿಟಿ ಹೊರ ವಲಯದ ಮಂತ್ರಾಲಯ ರಸ್ತೆಗೆ ಹೊರಟು ಮಿಟ್ಟಿ ಮಲ್ಕಾಪುರದ ಶ್ರೀ ವೆಂಕಟೇಶ್ವರ ಮಿನಿರಲ್ಸ್ ಸ್ಟೋನ್ ಕ್ರಷರ್ (ಎಂ ಸ್ಯಾಂಡ್ ) ಪ್ರವೇಶ ಮಾಡಿದರು.

ಮೊದಲಿಗೆ ವೆಂಕಟೇಶ್ವರ ಮಿನಿರಲ್ಸ್ ಸ್ಟೋನ್ ಕ್ರಷರ್ ಪ್ರದೇಶದಲ್ಲಿ ಸಂಚರಿಸಿ ಗಣಿಗಾರಿಕೆ ನಂತರ ಹಾಗೆಯೇ ಬಿಟ್ಟ ಕಂದಕದ ವೀಕ್ಷಣೆ ನಡೆಸಿದರು.

ಇದನ್ನು ಸಮತಟ್ಟು ಯಾಕೆ ಮಾಡಿಲ್ಲ? ಗಿಡ ಯಾಕೆ ನೆಟ್ಟಿಲ್ಲ?. ಇದನ್ನು ನೀವು ನೋಡಿಲ್ವಾ? ಲೀಸ್ ಪಡೆದ ಕಂಪನಿಯವರು ಕಾನೂನು ಉಲ್ಲಂಘನೆ ಮಾಡಿದಾರೆ ಅಂತ ಗೊತ್ತಾದಾಗಲೂ ನೀವು ನಿದ್ದೆ ಮಾಡತಿದೀರಾ? ಎಂದು ಗಣಿ ಇಲಾಖೆಯ ಅಧಿಕಾರಿಗಳಿಗೆ ಉಪ ಲೋಕಾಯುಕ್ತರು ತರಾಟೆ ತೆಗೆದುಕೊಂಡರು. ಬಳಿಕ ಲೋಕಾಯುಕ್ತರು, ಓಂ ಶಕ್ತಿ ಕಂಪನಿಯ ಮತ್ತೊಂದು ಕಲ್ಲು ಗಣಿಗಾರಿಕೆ ಪ್ರದೇಶಕ್ಕೆ ತೆರಳಿ ಗಣಿಪೀಡಿತ ಪ್ರದೇಶದಲ್ಲಿ ಅಂದಾಜು 100 ಅಡಿ ಆಳವಾಗಿ ಕೊರೆದ ಕಂದಕದ ವೀಕ್ಷಣೆ ನಡೆಸಿದರು.

100 ಅಡಿಯಷ್ಟು ಒಳಗೆ ಕೊರೆದು ಗಣಿಗಾರಿಕೆ ನಡೆಸಲು ನಿಯಮದಲ್ಲಿ ಅವಕಾಶವಿದೆಯಾ? ಸುರಕ್ಷತೆಗಾಗಿ ಸುತ್ತಲು ಜಾಗ ಬಿಡದೇ ಮನಬಂದಂತೆ ಗಣಿಗಾರಿಕೆ ನಡೆಸಿದ್ದನ್ನು ನೀವು ಗಮನಿಸಿದ್ದೀರಾ? ಉಲ್ಲಂಘನೆ ಅಂತ ಗೊತ್ತಾದ ಮೇಲೆ ನೋಟೀಸ್ ನೀಡಿದ್ದೀರಾ? ಎಂದು ಉಪ ಲೋಕಾಯುಕ್ತರು ಪ್ರಶ್ನಿಸಿದರು.

ವಾರ್ಷಿಕ ಅಂದಾಜು 25 ಕೋಟಿ ರೂ ನಷ್ಟು ವಾಹಿವಾಟು ನಡೆಸುವ ನಿಮಗೆ ನಿಮ್ಮ ಗಣಿಯಲ್ಲಿ ಕೆಲಸ ಮಾಡುವವರಿಗೆ ವಿಮೆಯನ್ನು ಕಡ್ಡಾಯ ಮಾಡಿಸಬೇಕು ಎಂಬುದು ತಿಳಿಯುವುದಿಲ್ಲವೇ ಎಂದು ಉಪ ಲೋಕಾಯುಕ್ತರು ಕಂಪನಿಯ ಮಾಲೀಕರಿಗೆ ಪ್ರಶ್ನಿಸಿದರು.

ಜಿಲ್ಲೆಯಲ್ಲಿನ ಎಲ್ಲ ಕ್ರಷರ್ ಮಾಲೀಕರಿಗೆ ಕೂಡಲೇ ಪತ್ರ ಕಳುಹಿಸಿ ಅಲ್ಲಿ ಕೆಲಸ ಮಾಡುವ ಎಲ್ಲರಿಗೂ ವಿಮೆ ಮಾಡಿಸಿದ ಬಗ್ಗೆ ವರದಿಯನ್ನು ಕೂಡಲೇ ಉಪ ಲೋಕಾಯುಕ್ತರ ಕಚೇರಿಗೆ ಕಳುಹಿಸಬೇಕು ಎಂದು, ಉಪ ಲೋಕಾಯುಕ್ತರು ಗಣಿ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಅನಧಿಕೃತ ಗಣಿಗಾರಿಕೆ ಬೇಡ: ಬಫರ್ ಝೋನ್ ಉಲ್ಲಂಘಿಸಿ ಗಣಿಗಾರಿಕೆ ನಡೆಸಿದ ಬಗ್ಗೆ ಕಂಪನಿಯವರಿಗೆ ನೋಟೀಸ್ ಜಾರಿ ಮಾಡಬೇಕು. ದಂಢ ವಿಧಿಸಬೇಕು ಎಂದು ಗಣಿ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದ ಉಪ ಲೋಕಾಯುಕ್ತರು, ಜಿಲ್ಲೆಯಲ್ಲಿ ಎಷ್ಟು ಕ್ವಾರಿಗಳಿವೆ ಎಂದು ಕೇಳಿದರು. ರಾಯಚೂರ ಜಿಲ್ಲೆಯಲ್ಲಿ 133 ಕ್ವಾರಿಗಳಿವೆ ಎಂದು ಅಧಿಕಾರಿಗಳು ಪ್ರತಿಕ್ರಿಯಿಸಿದರು. ಜಿಲ್ಲೆಯ ಯಾವುದೇ ಕಡೆಗಳಲ್ಲಿ ಅನಧಿಕೃತವಾಗಿ ಗಣಿಗಾರಿಕೆ ನಡೆಯಕೂಡದು ಎಂದು ಇದೆ ವೇಳೆ ಉಪ ಲೋಕಾಯುಕ್ತರು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಮಾಲೀಕರು ಕಾನೂನುಬದ್ಧವಾಗಿ ಕೆಲಸ ಮಾಡಲಿ: ಆಯಾ ಗಣಿಗಳ ಮಾಲೀಕರು ಕಾನೂನು ಬದ್ಧವಾಗಿ ಕೆಲಸ ಮಾಡಬೇಕು. ಲೀಸ್ ಪಡೆದುಕೊಂಡ ಸ್ಥಳದಲ್ಲಿ ಬೌಂಡ್ರಿಗೆ ನಿಗದಿಪಡಿಸಿದ ಜಾಗ ಕಡ್ಡಾಯ ಬಿಡಬೇಕು. ಲೀಸ್ ಷರತ್ತಿನಲ್ಲಿನ ಎಲ್ಲ ನಿಯಮಗಳ ಪಾಲನೆ ಮಾಡಬೇಕು. ಮಾಲೀಕರು ಮತ್ತು ಎಲ್ಲ ಕೆಲಸಗಾರರು ವಿಮೆ ಮಾಡಿಸಬೇಕು ಎಂದು ಉಪ ಲೋಕಾಯುಕ್ತರು ಸಲಹೆ ಮಾಡಿದರು.

ತಾಯಿ ಗರ್ಭ ಸೀಳಿದಂತಿದೆ: ಗಣಿಗಾಗಿ ತೆಗೆದ ಕಂದಕವು ಭಯಾನಕವಾಗಿದೆ. ತಾಯಿ ಗರ್ಭವನ್ನು ಸೀಳಿದಂತಿದೆ. ಹೀಗೆ ಭೂಮಿಯಲ್ಲಿನ ಫಲವತ್ತತೆ ಕಿತ್ತ ಮೇಲೆ ಅದನ್ನು ಸರಿ ಮಾಡದಿದ್ದರೆ ಭೂಮಿ ಸಮತೋಲನ ಕಳೆದುಕೊಳ್ಳುತ್ತದೆ. ಭೂಮಿಯನ್ನು ಬರೀ ತಿನ್ನೋದಾ? ಅಗೆಯೋದಾ?

ಮರಳಿ ಹಾಕಲ್ವಾ? ಎಂದು ಪ್ರಶ್ನಿಸಿದ ಉಪ ಲೋಕಾಯುಕ್ತರು, ಗಣಿ ಮಾಲೀಕರಿಗೆ ತೊಂದರೆ ಕೊಡಬೇಕು ಎಂಬುದು ನಮ್ಮ ಉದ್ದೇಶವಲ್ಲ; ಕ್ವಾರಿ ಕ್ಲೋಸರ್ ಪ್ಲಾನದಲ್ಲಿ ಏನು ಇದೆ ಅದನ್ನು ಆಯಾ ಮಾಲೀಕರು ಪೂರ್ಣಗೊಳಿಸಬೇಕು, ಕಂದಕ ಮುಚ್ಚಬೇಕು, ಸಮತಟ್ಟು ಮಾಡಬೇಕು. ಗಿಡ ನೆಡಬೇಕು. ಭೂಮಿ ಕಾಪಾಡಬೇಕು ಎಂದು ತಿಳಿಸುತ್ತಿದ್ದೇವೆ ಎಂದರು.

ಆರ್ ಟಿಓಗೆ ಸೂಚನೆ: ಗಣಿಗಾರಿಕೆಗೆ ಎಷ್ಟು ಗಾಡಿಗಳನ್ನು ಬಳಸಲಾಗುತ್ತದೆ. ಎಲ್ಲ ಗಾಡಿಗಳಿಗೆ ಜಿಪಿಎಸ್ ಫಿಕ್ಸ್ ಮಾಡಿದ್ದನ್ನು ನೋಡಿದ್ದೀರಾ? ಒಂದೇ ನಂಬರ್ ಪ್ಲೇಟನಲ್ಲಿ ಎಷ್ಟು ಗಾಡಿಗಳು ಓಡುತ್ತವೆ? ಎಂದು ಉಪ ಲೋಕಾಯುಕ್ತರು, ಪ್ರಾದೇಶಿಕ ಸಾರಿಗೆ ಅಧಿಕಾರಿಗೆ ಪ್ರಶ್ನಿಸಿ, ವಾಹನಗಳ ಮೇಲ್ವಿಚಾರಣೆ ಸರಿಯಾಗಿ ನಡೆಯುವಂತಾಗಬೇಕು ಎಂದು ಸೂಚನೆ ನೀಡಿದರು.

ಗಾಂಜಾ ಗುಟಕಾ ತಿನಬೇಡಿ: ಆರೋಗ್ಯ ಉಳಿಸಿಕೊಳ್ಳಿ. ಗುಟಕಾ ಸೀಗರೇಟು ಸೇದಬೇಡಿ. ಎಲ್ಲರೂ ಕಡ್ಡಾಯ ವಿಮೆ ಮಾಡಿಸಿ ಎಂದು ಇದೆ ವೇಳೆ ಉಪ ಲೋಕಾಯುಕ್ತರು ಗಣಿಯಲ್ಲಿರುವ ಕೆಲಸದಾರರಿಗೆ ಸಲಹೆ ಮಾಡಿದರು.

ತಪ್ಪಿತಸ್ಥರೆಲ್ಲರ ಮೇಲೂ ಸುಮೊಟೊ ಕೇಸ್: ಗಣಿಗಾರಿಕೆ ಪೀಡಿತ ಇಡೀ ಪ್ರದೇಶದ ಮೇಲೆ ಸ್ಥಳದಲ್ಲೆ ಕೇಸ್ ದಾಖಲಿಸಿದ್ದೇನೆ. ಕಾನೂನುಬದ್ಧವಾಗಿ ಪ್ರಕರಣದ ವಿಚಾರಣೆ ನಡೆಸಿ ತಪ್ಪಿತಸ್ಥರು ಎಂದು ಕಂಡುಬಂದರೆ ಗಣಿಗಾರಿಕೆಗೆ ಸಂಬಂಧಿಸಿದ ಬೇರೆ ಬೇರೆ





ಇಲಾಖೆಗಳ ಅಧಿಕಾರಿಗಳ ಮೇಲೂ ಕೇಸ್ ದಾಖಲಿಸಲಾಗುವುದು ಎಂದು ಉಪ ಲೋಕಾಯುಕ್ತರಾದ ಬಿ ವೀರಪ್ಪ ಅವರು ಸುದ್ದಿಗಾರರಿಗೆ ತಿಳಿಸಿದರು.

ಈ ಸಂದರ್ಭದಲ್ಲಿ ಬೆಂಗಳೂರಿನ ಉಪ ಲೋಕಾಯುಕ್ತ ಕಚೇರಿಯ ಅಪರ ನಿಬಂಧಕರಾದ ನ್ಯಾಯಾಧೀಶರಾದ ರಮಾಕಾಂತ ಚವ್ಹಾಣ್, ಶಿವಾಜಿ ಅನಂತ ನಲವಾಡೆ, ಉಪ ನಿಬಂಧಕರು ಆಗಿರುವ ನ್ಯಾಯಾಧೀಶರಾದ ಅರವಿಂದ, ರಾಯಚೂರು ಲೋಕಾಯುಕ್ತ ಪೊಲೀಸ್ ಅಧೀಕ್ಷಕರಾದ ಸತೀಶ್ ಬಿ.ಚಿಟುಗುಬ್ಬಿ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆ, ಭೂಮಾಪನ ಇಲಾಖೆ, ಪರಿಸರ ಇಲಾಖೆ, ಜೆಸ್ಕಾಂ, ಆರ್ ಟಿಓ, ಕಾರ್ಮಿಕ ಇಲಾಖೆ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

## ಮೊದಲನೇಯ ಪುಟದಿಂದ

# ಕಾಂಗ್ರೆಸ್ ಸರ್ಕಾರದ ವಿರುದ್ಧ ತೀವ್ರ ಅಶೋಕ್ ವಾಗ್ದಾಳಿ

ಹೊಡೆಯುವಂತೆ ಕಾಣುತ್ತಿದೆ ಎಂದು ಆರೋಪಿಸಿದ್ದಾರೆ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಕಳೆದ ಎರಡು ವರ್ಷಗಳಲ್ಲಿ ನೀರು, ಹಾಲು, ಕರೆಂಟ್, ಪೆಟ್ರೋಲ್, ಡೀಸೆಲ್, ಆಸ್ತಿ ತೆರಿಗೆ, ನೋಂದಣಿ ಮತ್ತು ಮುದ್ರಾಂಕ ಶುಲ್ಕ ಹೀಗೆ ಪ್ರತಿಯೊಂದು ವಸ್ತು, ಸೇವೆಗಳ ಬೆಲೆ ಏರಿಕೆ ಮಾಡಿ, ತೆರಿಗೆ ಹೆಚ್ಚಿಸಿ ಜನಸಾಮಾನ್ಯರ ರಕ್ತ ಹೀರುತ್ತಿದೆ. ಇದು ಸಾಲದೆಂದು ಈಗ ಕೇಂದ್ರ ಸರ್ಕಾರ ಜಿಎಸ್‌ಟಿ ದರಗಳನ್ನು ಕಡಿಮೆ ಮಾಡಲು ಹೊರಟಿದ್ದರೆ ಅದನ್ನೂ ವಿರೋಧ ಮಾಡಲು ಮುಂದಾಗಿದೆ. ಒಟ್ಟಿನಲ್ಲಿ ಜನವಿರೋಧಿ ಕಾಂಗ್ರೆಸ್ ಸರ್ಕಾರಕ್ಕೆ ತೆರಿಗೆ ಭಾರ ಇಳಿಸುವುದಕ್ಕಿಂತ, ಸರ್ಕಾರದ ಆದಾಯವೇ ಆದ್ಯತೆ ಆಗಿರುವುದು ಕನ್ನಡಿಗರ ದುರದೃಷ್ಟ ಎಂದು ಟೀಕಿಸಿದ್ದಾರೆ.

**ಆಸ್ತಿ ನೋಂದಣಿ ಶುಲ್ಕ ಕಡಿಮೆ ಮಾಡಿ:**

ಮತ್ತೊಂದು ಪೋಸ್ಟ್ ನಲ್ಲಿ ಆಡು ಮುಟ್ಟದ ಸೊಪ್ಪಿಲ್ಲ ಕಾಂಗ್ರೆಸ್ ಸರ್ಕಾರ ಜನರ ಜೇಬಿಗೆ ಕನ್ನ ಹಾಕದ ದಿನವಿಲ್ಲ.ನೀರು, ಹಾಲು, ಪೆಟ್ರೋಲ್, ಡಿಸೇಲ್, ಕರೆಂಟು, ಬಸ್ಸು, ಮೆಟ್ರೊ, ಆಸ್ತಿ ತೆರಿಗೆ, ಜನನ ಮರಣ ಪ್ರಮಾಣ ಪತ್ರದ ಶುಲ್ಕ ಸೇರಿ ಎಲ್ಲಾ ವಸ್ತು/ಸೇವೆಗಳ ಬೆಲೆಯನ್ನು ಈಗಾಗಲೇ ಮನಬಂದಂತೆ ಏರಿಸಿರುವ ಕಾಂಗ್ರೆಸ್ ಸರ್ಕಾರದ ವಕ್ರದೃಷ್ಟಿ ಈಗ ಆಸ್ತಿ ನೋಂದಣಿ ಶುಲ್ಕದ ಮೇಲೆ ಬಿದ್ದಿದೆ ಎಂದು ಗುಡುಗಿದ್ದಾರೆ. ಆಸ್ತಿ ನೋಂದಣಿ ಶುಲ್ಕವನ್ನು ಏಕಾಏಕಿ ಶೇ.100 ರಷ್ಟು ಏರಿಸುವ ಮೂಲಕ ಕಾಂಗ್ರೆಸ್ ಸರ್ಕಾರ ಮತ್ತೊಮ್ಮೆ ತನ್ನ ಜನವಿರೋಧಿ ನೀತಿಯನ್ನು ನಿರ್ಲಜ್ಜವಾಗಿ ಪ್ರದರ್ಶಿಸಿದೆ ಎಂದಿದ್ದಾರೆ.

# ನ್ಯಾಯಾಂಗ, ಪತ್ರಿಕಾರಂಗ ಬಲಿಷ್ಟಗೊಳಿಸೋಣ: ಉಪ ಲೋಕಾಯುಕ್ತರಾದ ನ್ಯಾ. ಬಿ.ವೀರಪ್ಪ ಸಲಹೆ

ಕಾರ್ಯಾಂಗವನ್ನು ಸರಿ ಮಾಡಲು ಶಕ್ತಿ ಮೀರಿ ಪ್ರಯತ್ನಿಸಬೇಕು. ಇರುವುದನ್ನು ಪತ್ರಕರ್ತರು ಬರೆಯಬೇಕು. ನ್ಯಾಯಾಧೀಶರ ಲೇಖನಿ ಬಲಿಷ್ಟವಾಗಬೇಕು ಎಂದು ಉಪ ಲೋಕಾಯುಕ್ತರು ಸಲಹೆ ಮಾಡಿದರು.

ವಕೀಲರು ಕಾನೂನು ಅಧ್ಯಯನ ಮಾಡಬೇಕು. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಜೊತೆಗೆ ಕೈಜೋಡಿಸಿ ಹಾಸ್ಟೇಲ್, ಅಂಗನವಾಡಿ, ಶಾಲೆಗಳಿಗೆ ಭೇಟಿ ನೀಡಿ ಅಲ್ಲಿನ ವ್ಯವಸ್ಥೆಯ ಬಗ್ಗೆ ಪರಿಶೀಲಿಸಬೇಕು. ಕಾಯಾ ವಾಚಾ ಮನಸಾ ಕೆಲಸ ಮಾಡಬೇಕು ಎಂದು ಸಲಹೆ ಮಾಡಿದರು.

ವಕೀಲರಿಗೆ ಹಣದ ವ್ಯಾಮೋಹ ಇರಬಾರದು. ಕಕ್ಷಿದಾರರು 1 ರೂಪಾಯಿ ನೀಡಿದರು ತಮ್ಮ ಕಾರ್ಯವನ್ನು ನಿಷ್ಠೆಯಿಂದ ಮಾಡಬೇಕು. ಹಣ ಪಡೆದು ಕೋರ್ಟಗೆ ಹೋದರೆ ಅದು ಮೋಸ ಎಂದು ತಿಳಿಯಬೇಕು.

ನಮ್ಮ ದೇಶದ ಸ್ವಾತಂತ್ರದ ಹೋರಾಟದಲ್ಲಿ ಪತ್ರಿಕೆಗಳು ಮತ್ತು ಪತ್ರಕರ್ತರ ಪಾತ್ರವು ಸಹ ಪ್ರಮುಖವಾಗಿತ್ತು. ಇತ್ತೀಚಿನ ದಿನಗಳಲ್ಲಿ ಪತ್ರಿಕಾ ರಂಗವು ದುರ್ಬಲವಾಗುತ್ತಿದೆ.ಗಾಂಧೀಜಿಯವರು ಕಂಡ ರಾಮರಾಜ್ಯದ ಕನಸು ನನಸಾಗಲು ಪತ್ರಿಕಾರಂಗ ಹಾಗೂ ನ್ಯಾಯಾಂಗವು ಬಲಿಷ್ಠವಾಗಬೇಕು ಎಂದು ಅವರು ಸಲಹೆ ಮಾಡಿದರು.

ನಾವು ತಿನ್ನುವ ಅನ್ನವು ನಮ್ಮದಾಗಿರಬೇಕು. ಬೇರೆಯವರ ಅನ್ನ ತಿಂದರೆ ಅದು ವಿಷಕ್ಕೆ ಸಮ ಎನ್ನುವ ತತ್ವ ಅರಿತು ನಡೆಯಬೇಕು.ಜನರಲ್ಲಿ ಪ್ರೀತಿ, ಪ್ರೇಮ ವಿಶ್ವಾಸ ಬೆಳೆಸಬೇಕು. ನಿಷ್ಠೆಯಿಂದ ಜೀವನ ನಡೆಸಬೇಕು ಎಂದು ಉಪ ಲೋಕಾಯುಕ್ತರು ವಕೀಲರಿಗೆ ಮತ್ತು ಪತ್ರಕರ್ತರಿಗೆ ಸಲಹೆ ಮಾಡಿದರು.

ಜಾತಿಗೊಂದು, ಧರ್ಮಕ್ಕೊಂದು ನ್ಯಾಯಾಲಯ ನಮ್ಮಲ್ಲಿ ಇಲ್ಲ. ಎಲ್ಲರಿಗೂ ಒಂದೇ ನ್ಯಾಯಾಲಯ ಅನ್ನುವುದೇ ವಿಶೇಷ. ದೇವರಿಂದ ಸಿಗದಿದ್ದರು ನ್ಯಾಯ ನೀಡುವ ನ್ಯಾಯಾಲಯವೇ ನಮಗೆ ದೇವಸ್ಥಾನವಿದ್ದಂತೆ. ಹಾಗಾಗಿ ನಾವು ಯಾವುದೇ ಜಾತಿ, ಧರ್ಮದ ಬೇಧ-ಭಾವ ಮಾಡದೇ ಕಾರ್ಯನಿರ್ವಹಿಸಬೇಕು ಎಂದು ಉಪ ಲೋಕಾಯುಕ್ತರು ಸಲಹೆ ಮಾಡಿದರು.

ಮಹಾತ್ಮ ಗಾಂಧೀಜಿಯವರು ಸಹ ವಕೀಲರಾಗಿದ್ದರು. ಅಂತಹ ಮಹನಿಯರ ಜೀವನ ಮೌಲ್ಯ ಪಾಲನೆ ಮಾಡಬೇಕು. ಯುವ ವಕೀಲರು ಶಿಸ್ತು ರೂಢಿಸಿಕೊಳ್ಳಬೇಕು. ನ್ಯಾಯಾಧೀಶರು ಸಹ ಗೌರವಿಸುವ ಹಾಗೆ ಡ್ರೆಸ್ ಹಾಕಬೇಕು ಎಂದು ಸಲಹೆ ಮಾಡಿದರು.

ಸಮಾರಂಭದಲ್ಲಿ ಗೌರವಾನ್ವಿತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಮಾರುತಿ ಎಸ್. ಬಾಗಡೆ, ಕರ್ನಾಟಕ ಲೋಕಾಯುಕ್ತರ ಅಪರ ನಿಬಂಧಕರು ಆಗಿರುವ ನ್ಯಾಯಾಧೀಶರಾದ ರಮಾಕಾಂತ್ ಚವ್ಹಾಣ, ಶಿವಾಜಿ ನಾಲವಾಡೆ, ಕರ್ನಾಟಕ ಲೋಕಾಯುಕ್ತರ ಉಪ ನಿಬಂಧಕರು ಮತ್ತು ನ್ಯಾಯಾಧೀಶರಾದ ಅರವಿಂದ, ಗೌರವಾನ್ವಿತ ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಹೆಚ್.ಎ.ಸಾತ್ವಿಕ್, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾದ ಮಲ್ಲಿಕಾರ್ಜುನ, ಪ್ರಧಾನ ಕಾರ್ಯದರ್ಶಿ ಲಕ್ಷ್ಮಪ್ಪ ಭಂಡಾರಿ ಸೇರಿದಂತೆ ವಿವಿಧ ವಿಭಾಗದ ನ್ಯಾಯಾಧೀಶರು, ವಕೀಲರು ಹಾಗೂ ಸಿಬ್ಬಂದಿ ಇದ್ದರು.

# ವಿಶ್ವದ ಆರ್ಥಿಕ ಸ್ಥಿರತೆಗಾಗಿ ಭಾರತ, ಚೀನಾ ಒಟ್ಟಾಗಿ ಕೆಲಸ ಮಾಡಬೇಕು : ಪ್ರಧಾನಿ ಮೋದಿ



**ಟೋಕಿಯೋ, ಆ. 30–** ವಿಶ್ವದ ಆರ್ಥಿಕ ವ್ಯವಸ್ಥೆಯಲ್ಲಿ ಸ್ಥಿರತೆಯನ್ನು ತರಲು ಭಾರತ ಹಾಗೂ ಚೀನಾ ಒಟ್ಟಾಗಿ ಕೆಲಸ ಮಾಡುವುದು ಬಹಳ ಮುಖ್ಯ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಪರಸ್ಪರ ಗೌರವ, ಹಂಚಿಕೆಯ ಆಸಕ್ತಿ,ಪರಸ್ಪರ ಸಂವೇದನೆಯ ಆಧಾರದ ಮೇಲೆ ಕಾರ್ಯತಂತ್ರದ ಮತ್ತು ದೀರ್ಘಕಾಲೀನ ದೃಷ್ಟಿಕೋನದೊಂದಿಗೆ ಎರಡೂ ದೇಶಗಳ ದ್ವಿಪಕ್ಷೀಯ ಸಂಬಂಧ ಗಳನ್ನು ಮುಂದಕ್ಕೆ ಕೊಂಡೊಯ್ಯಲು ಭಾರತ ಸಿದ್ಧವಾಗಿದೆ ಎಂದು ಅವರುಜಪಾನ್ ಭೇಟಿಯ ಸಮಯದಲ್ಲಿ ದಿ ಯೋಮಿಯುರಿ ಶಿಂಬುನ್‌ಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

ಪ್ರಧಾನಿ ಮೋದಿ ಅವರು ಭಾರತ ಮತ್ತು ಚೀನಾ ವಿಶ್ವದ ಎರಡು ಹೆಚ್ಚು ಜನಸಂಖ್ಯೆ ಹೊಂದಿರುವ ದೇಶಗಳು ಮತ್ತು ನೆರೆಹೊರೆಯುವರು ಎಂದು ಹೇಳಿದರು. ಪರಸ್ಪರ ಸಂಬಂಧಗಳನ್ನು ಸ್ಥಿರ, ಸ್ನೇಹಪರವಾಗಿಸಿದರೆ, ಅದು ಪ್ರಾದೇಶಿಕ ಮತ್ತು ಜಾಗತಿಕ ಶಾಂತಿ ಮತ್ತು ಸಮೃದ್ಧಿಯ ಮೇಲೆ ಸಕಾರಾತ್ಮಕ ಪರಿಣಾಮ ಬೀರುತ್ತದೆ.ಚೀನಾದೊಂದಿಗಿನ ಸಂಬಂಧಗಳನ್ನು ಸುಧಾರಿಸುವ ಮಹತ್ವದ ಬಗ್ಗೆ ಕೇಳಿದಾಗ, ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಆಹ್ವಾನದ ಮೇರೆಗೆ, ನಾನು ಇಲ್ಲಿಂದ ಟಿಯಾಂಜಿನ್‌ಗೆ ಎಸ್‌ಸಿಒ ಶೃಂಗಸಭೆಯಲ್ಲಿ ಭಾಗವಹಿಸಲು ಹೋಗುತ್ತಿದ್ದೇನೆ ಎಂದಿದ್ದಾರೆ.

ಕಳೆದ ವರ್ಷ ಕಜಾನ್‌ನಲ್ಲಿ ಅಧ್ಯಕ್ಷ ಕ್ಸಿ ಅವರೊಂದಿಗಿನ ನನ್ನ ಭೇಟಿಯ ನಂತರ, ನಮ್ಮ ದ್ವಿಪಕ್ಷೀಯ ಸಂಬಂಧಗಳಲ್ಲಿ ಸ್ಥಿರ ಮತ್ತು ಸಕಾರಾತ್ಮಕ ಪ್ರಗತಿ ಕಂಡುಬಂದಿದೆ ಎಂದರು.ವಿಶ್ವ ಆರ್ಥಿಕತೆಯಲ್ಲಿನ ಪ್ರಸ್ತುತ ಅಸ್ಥಿರತೆಯನ್ನು ಗಮನಿಸಿದರೆ, ವಿಶ್ವ ಆರ್ಥಿಕ ವ್ಯವಸ್ಥೆಗೆ ಸ್ಥಿರತೆಯನ್ನು ತರಲು ಎರಡು ಪ್ರಮುಖ ಆರ್ಥಿಕತೆಗಳಾಗಿ ಭಾರತ ಮತ್ತು ಚೀನಾ ಒಟ್ಟಾಗಿ ಕೆಲಸ ಮಾಡುವುದು ಸಹ ಮುಖ್ಯವಾಗಿದೆ.

ಜಾಗತಿಕ ಸಮುದಾಯವು 2030 ರ ವೇಳೆಗೆ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸುವ ಮೂಲಕ ಹೆಚ್ಚು ಸಮಾನವಾದ ಜಗತ್ತನ್ನು ನಿರ್ಮಿಸಲು ಬದ್ಧವಾಗಿದೆ ಎಂದು ಹೇಳಿದರು. 2030 ರ ವೇಳೆಗೆ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸುವ ಮೂಲಕ ಹೆಚ್ಚು ಸಮಾನವಾದ ಜಗತ್ತನ್ನು ಸೃಷ್ಟಿಸಲು ಜಾಗತಿಕ ಸಮುದಾಯವು ಬದ್ಧವಾಗಿದೆ ಎಂದು ಹೇಳಿದರು.

# ದಸರಾ ಉದ್ಘಾಟನೆಗೆ ಭಾನು ಮುಸ್ತಾಕ್‌ಗೆ ಮುತಾಲಿಕ್ ಖಂಡನೆ

**ಬೆಂಗಳೂರು,ಆ.30–**ದಸರಾ ಉದ್ಘಾಟನೆಗೆ ಸಾಹಿತಿ ಭಾನುಮುಸ್ತಾಕ್ ಅವರನ್ನು ಕರೆದಿರುವುದು ಸರಿಯಲ್ಲ, ಗೋಮಾಂಸ ತಿನ್ನುವವರಿಂದ ಪೂಜೆ ಒಪ್ಪಲು ಸಾಧ್ಯವಿಲ್ಲ. ಇದು ತಾಯಿ ಚಾಮುಂಡೇಶ್ವರಿಗೆ ಅಪವಿತ್ರ ತರುತ್ತೆ ಎಂದು ಶಿವರಾಮ ಸೇನೆಯ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ಹೇಳಿದರು.

ಬಾಗಲಕೋಟೆಯ ಕಲಾದಗಿ ಗ್ರಾಮದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಭಾನುಮುಸ್ತಾಕ್ ಅವರು ಸಾಹಿತ್ಯ ಕ್ಷೇತ್ರದಲ್ಲಿ ಅದ್ಭುತ ಸೇವೆ ಮಾಡಿದ್ದಾರೆ. ಕನ್ನಡಕ್ಕೆ ಬಹಳ ದೊಡ್ಡ ಕೊಡುಗೆ ಇದೆ. ಅದಕ್ಕೆ ನಮ್ಮ ಅಭಿನಂದನೆ. ಅವರು ಇಸ್ಲಾಂ, ಅವರು ಎಷ್ಟೇ ಪ್ರಗತಿಪರ ಎಂದರೂ ಅವರು ಮುಸ್ಲಿಮರೇ. ಮುಸ್ಲಿಂ ಸಮುದಾಯದಲ್ಲಿ ಏಕಾದೇವೋಪಾಸನ ಇದೆ. ನಮ್ಮಲ್ಲಿ ಹಾಗಿಲ್ಲ, ಬಹುದೇವೋಪಾಸನ ಮಾಡುತ್ತೇವೆ. ಅವರು ಮೂರ್ತಿ ದೇವಸ್ಥಾನ ಭಂಜಕರು, ಅವರಿಂದ ದಸರಾ ಉದ್ಘಾಟನೆ ಸರಿಯಲ್ಲ, ಇಡೀ ಕರ್ನಾಟಕಕ್ಕೆ ಅಶುಭ ಸಂದೇಶ ಹೋಗುತ್ತೆ ಎಂದು ಹೇಳಿದರು.

ಇತಿಹಾಸದಲ್ಲಿ ಬಂದ ಎಲ್ಲ ವಿದೇಶಿ ರಾಜರು, ಮೊಘಲರು ನಮ್ಮ ದೇವಸ್ಥಾನಗಳನ್ನು ಹೊಡೆದರು. ದೇವಸ್ಥಾನ ಭಂಜಕರು ಒಂದು ದೇವಸ್ಥಾನದ ಮೂರ್ತಿ ಪೂಜೆ ಮಾಡುವುದು ಎಷ್ಟು ಸರಿ, ಇದು ಕಾಂಗ್ರೆಸ್‌ನ ಮೂರ್ಖ, ನೀಚ ಕೆಲಸ, ಮತ ಬ್ಯಾಂಕ್‌ಗಾಗಿ ನಮ್ಮ ಸಂಪ್ರದಾಯ, ಸಂಸ್ಕೃತಿ ಹಾಳು ಮಾಡುತ್ತಿದ್ದಾರೆ ಎಂದು ಟೀಕಿಸಿದರು.ಸರ್ಕಾರ ಇದೆ ಎಂದು ಏನೂ ಬೇಕಾದರು ಮಾಡಬಹುದಾ? ಇದನ್ನು ಒಪ್ಪಲು ಸಾಧ್ಯವಿಲ್ಲ. ಸರ್ಕಾರಕ್ಕೆ ಚಾಮುಂಡೇಶ್ವರಿಯ ಶಾಪ ತಟ್ಟುತ್ತದೆ ಎಂದರು.

# ಎಸ್ಡಿಎಂಸಿ ಸಹಕಾರದಿಂದ ಶಾಲೆಗಳ ಪ್ರಗತಿ




ಯುವ ಮಾರ್ಗ ಸುದ್ದಿ

**ಅರಕೇರಾ,ಆ.30–** ಶಾಲೆಯ ಸರ್ವತೋಮುಖ ಅಭಿವೃದ್ಧಿಯಲ್ಲಿ ಶಿಕ್ಷ ಕರ ಜತೆಗೆ ಎಸ್‌ಡಿಎಂಸಿಯ ಪಾತ್ರ ಬಹುಮುಖ್ಯ ಎಂದು ಶಿಕ್ಷಣ ಪ್ರೇಮಿ ಭೀಮನಗೌಡ ಮಾಲಿ ಪಾಟೀಲ್ ಹೇಳಿದರು.

ತಾಲ್ಲೂಕಿನ ಪಂದ್ಯಾನ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶುಕ್ರವಾರ ಎಸ್ಡಿಎಂಸಿ ರಚನೆ ವೇಳೆ ಮಾತನಾಡಿದರು.

ಪ್ರತೀ ಶಾಲೆ ಸರ್ವತೋಮುಖ ಅಭಿವೃದ್ಧಿ ಕಾಣ ಬಕಾದರೆ ಶಿಕ್ಷ ಕರು, ಮಕ್ಕಳ ಪ್ರಯತ್ನದ ಜತೆಗೆ ಎಸ್‌ಡಿಎಂಸಿ ಸಹಕಾರ ಬಹುಮುಖ್ಯವಾಗುತ್ತದೆ. ಸ್ಥಳೀಯವಾಗಿ ಶಾಲೆಗೆ ಅಗತ್ಯವಾಗಿರುವ ಬೇಕು ಬೇಡಗಳನ್ನು ಒದಗಿಸಿ, ಸಮರ್ಪಕವಾಗಿ ನಿರ್ವಹಿಸುವ ಹೊಣೆ ನಿಮ್ಮ ಮೇಲಿದೆ ಎಂದು ಎಸ್‌ಡಿಎಂಸಿ ಪದಾಧಿಕಾರಿಗಳ ಜವಾಬ್ದಾರಿಯನ್ನು ಅರಿವಿಗೆ ತಂದರು. ಎಸ್‌ಡಿಎಂಸಿ ಸಹಕಾರದಿಂದ ಶಾಲೆಗಳು ಪ್ರಗತಿ ಕಾಣಲಿವೆ. ಶಾಲಾ ಸಮುದಾಯವನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಜಾಣ್ಮೆ ಮುಖ್ಯಶಿಕ್ಷ ಕರಿಗೆ ಇರಬೇಕು ಎಂದು ತಿಳಿಸಿದರು.

ಈ ವೇಳೆ ಗ್ರಾಪಂ ಅಧ್ಯಕ್ಷರಾದ ಬಸವರಾಜ ಮಾ.ಪಾ, ಎಸ್ಡಿಎಂಸಿ ಅಧ್ಯಕ್ಷ ರಮೇಶ ಮಾ.ಪಾ, ಉಪಾಧ್ಯಕ್ಷರಾದ ಶಿವಮ್ಮ ಗಂಡ ಸಾಬಣ್ಣ ಯಾದವ, ತೋಟಪ್ಪ ಪೂಜಾರಿ, ಬಾಲಪ್ಪ ನಾಯಕ, ಸಂಜೀವಯ್ಯ, ಸಾಬಣ್ಣ, ಭೀಮಣ್ಣ, ಹಂಪನಗೌಡ ಪೊ.ಪಾ, ಶಿವರಾಜ, ಬಾಲಪ್ಪ, ಶಾಂತಪ್ಪ, ಬಿಆರ್.ಮನೋಹರ, ಸಿಆರ್.ಪಿ ಬಸ್ಸಯ್ಯ ಸಾಥಲ್, ಮುಖ್ಯ ಶಿಕ್ಷಕಿ ಸವಿತಾ ಬಾಯಿ ಸೇರಿದಂತೆ ಎಸ್ಡಿಎಂಸಿ ಸದಸ್ಯರು ಗ್ರಾಮಸ್ಥರು ಹಾಗೂ ಜಾಲಹಳ್ಳಿ ಠಾಣೆಯ ಪೋಲಿಸ್ ಸಿಬ್ಬಂದಿ ಇದ್ದರು.

# ನೀರಮಾನ್ವಿ ಗ್ರಾಮದಲ್ಲಿನ ಕರೆ ಗುಡ್ಡದಲ್ಲಿ ನವಶಿಲಾಯುಗದ ಮಾನವರು ಬಿಡಿಸಿದ ಚಿತ್ರಗಳು





ಯುವ ಮಾರ್ಗ ಸುದ್ದಿ

**ಮಾನ್ವಿ,ಆ.30–**ತಾಲೂಕಿನ ನೀರಮಾನ್ವಿ ಗ್ರಾಮದಲ್ಲಿನ ಕರೆ ಗುಡ್ಡ ಹಾಗೂ ಬಿಳಿಗುಡ್ಡಗಳಲ್ಲಿ ಶಿಲಾಯುಗದ ಕಾಲದ ಮಾನವರು ವಾಸ ಮಾಡಿದ ಕುರುಹುಗಳು ಪತ್ತೆಯಾಗಿರುವುದರಿಂದ ನೀರಮಾನ್ವಿ ಗ್ರಾಮದಲ್ಲಿ 4ಸಾವಿರ ವರ್ಷಗಳ ಇತಿಹಾಸವನ್ನು ಕಾಣುವುದಕ್ಕೆ ಸಾಧ್ಯವಾಗಿದೆ.

ಇತಿಹಾಸ ಸಂಸೋಧಕರಾದ ಡಾ.ಚನ್ನಬಸಪ್ಪ ಮಲ್ಕಂದಿನ್ನಿ ಮಾತನಾಡಿ ನೀರಮಾನ್ವಿ ಗ್ರಾಮದಲ್ಲಿನ ದಕ್ಷಿಣ ದಿಕ್ಕಿನಲ್ಲಿರುವ ಕರೆಗುಡ್ಡವು ಸಣ್ಣ ಸಣ್ಣ ಗುಂಡು ಕಲ್ಲುಗಳಿರುವುದುರಿಂದ ಹಾಗೂ ಗುಡ್ಡದಲ್ಲಿ ಸಾಕಷ್ಟು ಸಣ್ಣ ಗುಹೆಗಳು ಇರುವುದರಿಂದ ಈ ಗುಡ್ಡದಲ್ಲಿ ಮಾನವರು ವಾಸಮಾಡುವುದಕ್ಕೆ ಆಯ್ಕೆ ಮಾಡಿಕೊಂಡಿರುವುದು ಕಂಡು ಬರುತ್ತದೆ. ಗುಹೆಗಳ ಹತ್ತಿರದಲ್ಲಿನ ಸಮತಟ್ಟದ ಗುಂಡು ಕಲ್ಲಿನ ಮೇಲೆ ಬೃಹತ್ ಶಿಲಾಯುಗಕ್ಕೆ ಸೇರಿದಂತಹ ಅದಿ ಮಾನವರು ತಾವು ಸುತ್ತ ಮುತ್ತಲಿನ ಪರಿಸರದಲ್ಲಿ ಕಂಡಂತಹ ಮಾನವರ ,ಪ್ರಾಣಿಗಳ ಚಿತ್ರಗಳನ್ನು ಕಲ್ಲಿನಿಂದ ಕುಟ್ಟಿ ಬಿಡಿಸಿರುವುದನ್ನು ಕಾಣಬಹುದಾಗಿದೆ. ಕಲ್ಲಿನ ಬಂಡೆಗಳಲ್ಲಿ ಹೆಚ್ಚಾಗಿ ಮನುಷ್ಯ ನಿಂತಿರುವ ಬಂಗಿಯಲ್ಲಿರುವ ಚಿತ್ರ,ಗೂಳಿಗಳು, ಸಾರಂಗ,ಆನೆ, ಹುಲಿ,ಚಿರತೆ,ಬಾಣದ ಮೊನಚುಗಳು, ಹುಳಿಗಳು,ಜಿಂಕೆ,ನವಿಲು,ಮಾನವರು ಬೇಟೆಯಾಡುತ್ತಿರುವ ಹಾಗೂ ಗೂಳಿಗಳನ್ನು ಪಳಗಿಸುತ್ತಿರುವ ಚಿತ್ರಗಳನ್ನು ನಾವು ಕಾಣಬಹುದು. ಕರೆಗುಡ್ಡ ಸುತ್ತಮುತ್ತ ವಿಶಾಲವಾದ ಬಯಲು ಜಾಗವಿರುವುದರಿಂದ ಈ ಪ್ರದೇಶವು ಅದಿಮಾನವರು ವಾಸಕ್ಕೆ ಆಯ್ಕೆ ಮಾಡಿಕೊಂಡಿರುವುದು ಕಂಡು ಬರುತ್ತದೆ. ಈ ಪ್ರದೇಶದಲ್ಲಿ ದಟ್ಟವಾದ ಆರಣ್ಯ ವಿರುವುದು ಈ ಚಿತ್ರಗಳಿಂದ ಕಂಡುಬರುತ್ತದೆ. ಹಾಗೂ ಈ ಚಿತ್ರಗಳು ನಾಲ್ಕು ಸಾವಿರ ವರ್ಷಗಳ ಕೇಳಗೆ ಮಾನವರ ಜೀವನ ವಿಧಾನವನ್ನು ಅಧ್ಯಾಯನ ಮಾಡುವುದಕ್ಕೆ ಅನುಕೂಲ ಮಾಡಿಕೊಡುತ್ತವೇ. ಗ್ರಾಮದ ಹೊರವಲಯದಲ್ಲಿನ ಬೂದಿ ದಿಬ್ಬಗಳು ಹಾಗೂ ಪುರಾತನ ಮಡಿಕೆಗಳು ಕಂಡುಬಂದಿದ್ದು ಈ ಭಾಗದಲ್ಲಿ ಅಂದಿನ ಅಲೆಮಾರಿ ಜನರು ಕೃಷಿ ಹಾಗೂ ಜನುವಾರುಗಳೊಂದಿಗೆ ವಾಸಮಾಡಿರುವುದರ ಕುರುಹುಗಳನ್ನು ತಿಳಿಸುತ್ತವೇ.

ಈ ಪ್ರದೇಶವನ್ನು ಕಾಲನು ಕ್ರಮದಲ್ಲಿ ಮೌರ್ಯರು ,ಶಾತವಾಹನರು,ಬಾದಮಿ ಚಾಳುಕ್ಯರು,ಕಳಚೂರಿಗಳುಸೇವಣರು, ವಿಜಯನಗರ ಸಾಮ್ರಾಜ್ಯ,ಬಹುಮಾನ ಸುಲ್ತಾನರು ಮತ್ತು ಹೈದ್ರಾಬಾದ್ ಆಸೀಫ್‌ಬಹುಮಾನಿ ಸುಲ್ತಾನರು ಆಳ್ವಿಕೆ ಮಾಡಿರುವುದನ್ನು ಇಲ್ಲಿನ ವೀರಗಲ್ಲುಗಳ ಮೂಲಕ ತಿಳಿಯುತ್ತದೆ. 17 ನೇ ಶತಮಾನದಲ್ಲಿನ ವೀರಗಲ್ಲುಗಳಲ್ಲಿನ ವೀರರು ಬಂದೂಕುಗಳನ್ನು ಹಿಡಿದಿರುವುದರಿಂದ ಗ್ರಾಮವು ಪ್ರಮುಖ ಜನ ವಸತಿಯುಳ ಪ್ರದೇಶವಾಗಿತ್ತು ಎನ್ನುವುದನ್ನು ಸೂಚಿಸುತ್ತದೆ. ಇಲ್ಲಿನ ಇಪತ್ತಕ್ಕೂ ಹೆಚ್ಚು ಮಹಾಸತಿ ವೀರಗಲ್ಲುಗಳು ,ಬೇಟೆ ವೀರಗಲ್ಲುಗಳು, ಕುದುರೆ ವೀರಗಲ್ಲುಗಳಿಂದ ಅಂದಿನ ಜನರ ಜೀವನವನ್ನು ತಿಳಿಯುವುದಕ್ಕೆ ಅನುಕೂಲ ಮಾಡಿಕೊಡುತ್ತವೆ ಎನ್ನುತ್ತಾರೆ.

ನೀರಮಾನ್ವಿ ಗ್ರಾಮದಲ್ಲಿನ ಪ್ರಾಚೀನ ಶಿಲಾಯುಗದ ಚಿತ್ರಗಳು ಬಯಲು ಕಲ್ಲು ಬಂಡೆಗಳಲ್ಲಿರುವುದರಿಂದ ಮಳೆ ಮತ್ತು ಇತರ ನೈಸಗ್ರಿಕ ಕಾರಣಗಳಿಂದ ನಾಶವಾಗುತ್ತಿವೆ ಅದ್ದರಿಂದ ಅವುಗಳ ರಕ್ಷಣೆಗೆ ಕ್ರಮ ಕೈಗೊಳ್ಳಬೇಕು, ಗ್ರಾಮದ ಕುರಿ ಮತ್ತು ದನ ಕಾಯುತ್ತಿರುವ ಹುಡುಗರು ಶಿಲಾಯುಗದ ಮಾನವರು ಬಿಡಿಸಿದ ಚಿತ್ರಗಳ ಹತ್ತಿರ ತಮ್ಮ ಹೇಸರು ಹಾಗೂ ವಿವಿಧ ಚಿತ್ರಗಳನ್ನು ಬಿಡಿಸುತ್ತಿರುವುದರಿಂದ ಈ ಚಿತ್ರಗಳು ನಾಶವಾಗುತ್ತಿವೆ ಅದ್ದರಿಂದ ಇವುಗಳನ್ನು ರಕ್ಷಣೆ ಮಾಡಬೇಕು ಹಾಗೂ ಇತಿಹಾಸ ವಿದ್ಯಾರ್ಥಿಗಳಿಗೆ,ಸಂಶೋಧಕರಿಗೆ ಅನುಕೂಲವಾಗುವಂತೆ ಮಾಹಿತಿ ಫಲಕಗಳನ್ನು ಅಳವಡಿಸಬೇಕು, ಗ್ರಾಮದಲ್ಲಿನ ಪ್ರಾಚಿನ ಇತಿಹಾಸವನ್ನು ಪಠ್ಯ ಪುಸ್ತಗಳಲ್ಲಿ ಮುದ್ರಿಸುವ ಮೂಲಕ ಮಕ್ಕಳಿಗೆ ಇತಿಹಾಸವನ್ನು ತಿಳಿಸಬೇಕು ಎಂದು ಗ್ರಾಮದ ಮಾಜಿ ಯೋಧ ಆಂಜಿನೇಯ್ಯ ಜಲ್ಲಿ ಒತ್ತಾಯಿಸುತ್ತಾರೆ. ಸಲ್ಲಾವುದಿನ್ನಿ,ಜಗನ್ನಾಥ ಚೌದ್ರಿ ಇತಿಹಾಸಕಾರರಿಗೆ ಅಗತ್ಯ ನೆರವು ನೀಡಿದ್ದಾರೆ.

## ಪಾಲಿಕೆ ವಿರೋಧ ಪಕ್ಷದ ನಾಯಕಿಯಾಗಿ ಶೋಭಾ ದೇಸಾಯಿ ಅಧಿಕಾರ ಸ್ವೀಕಾರ

**ಕಲಬುರಗಿ,ಆ.30–**ಮಹಾನಗರ ಪಾಲಿಕೆಯ ವಿರೋಧ ಪಕ್ಷದ ನಾಯಕರಾಗಿ 52ನೇ ವಾನ ಪಾಲಿಕೆ ಸದಸ್ಯೆ ಶೋಭಾ ಗುರುರಾಜ ದೇಸಾಯಿ ಅವರು ಇಂದು ಅಧಿಕಾರ ಸ್ವೀಕರಿಸಿದರು.



ಆ ಮೂಲಕ ಪಾಲಿಕೆ ಮೇಯರ್, ಉಪಮೇಯರ್, ವಿರೋಧ ಪಕ್ಷದ ನಾಯಕ ಹುದ್ದೆಗಳು ಮಹಿಳೆಯರ ಪಾಲಾದಂತಾಗಿದೆ.

ಮಹಾನಗರ ಪಾಲಿಕೆ ಆಯುಕ್ತ ಶಿಂಧೆ ಅವಿನಾಶ್ ಸಂಜೀವನ್, ಮಾಜಿ ಶಾಸಕ ದತ್ತಾತ್ರೇಯ ಪಾಟೀಲ ರೇವೂರ, ಬಿಜೆಪಿ ನಗರಾಧ್ಯಕ್ಷ ಚಂದು ಪಾಟೀಲ ಸೇರಿದಂತೆ ಬಿಜೆಪಿ ಮುಖಂಡರು, ಅಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಯುವ ಮಾರ್ಗ



# ನೆರೆ ರಾಜ್ಯಗಳ ದರಗಳೊಂದಿಗೆ ಸಮೀಕರಿಸಿ ನೋಂದಣಿ ಮತ್ತು ಮುದ್ರಾಂಕ ಶುಲ್ಕ ಪರಿಷ್ಕರಣೆ

**ಬೆಂಗಳೂರು ಅ.30–** ಕರ್ನಾಟಕ ರಾಜ್ಯ ಸರ್ಕಾರವು ಆಗಸ್ಟ್ ,31 ರಿಂದ ಜಾರಿಗೊಳಿಸುತ್ತಿರುವ ಸ್ಥಿರಾಸ್ತಿ ಮೇಲಿನ ವ್ಯವಹಾರಗಳ ದಸ್ತಾವೇಜುಗಳಿಗೆ ವಿಧಿಸುತ್ತಿರುವ ನೋಂದಣಿ ಮತ್ತು ಮುದ್ರಾಂಕ ಶುಲ್ಕವು ನೆರೆಹೊರೆಯ ರಾಜ್ಯಗಳಲ್ಲಿರುವ ದರಗಳಿಗಿಂತ ಪ್ರಸ್ತುತ ಕಡಿಮೆ ಶುಲ್ಕ ಇದ್ದು, ಅದನ್ನು ಇತರೆ ರಾಜ್ಯಗಳ ಶುಲ್ಕಗಳೊಂದಿಗೆ ಸಮೀಕರಣ ಮಾಡಿ ಪರಿಷ್ಕರಿಸಲಾಗುತ್ತಿದೆ ಎಂದು ನೋಂದಣಿ ಮತ್ತು ಮುದ್ರಾಂಕ ಶುಲ್ಕ ಆಯುಕ್ತ ಮುಲ್ಲೈ ಮುಗಿಲನ್ ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು, ಮುದ್ರಾಂಕ ,ನೋಂದಣಿ ಹಾಗೂ ಇತರೆ ಸೆಸ್ ಸೇರಿ ಕರ್ನಾಟಕ ರಾಜ್ಯವು ಶೇ.6.6 ರಷ್ಟು ವಿಧಿಸುತ್ತಿತ್ತು. ಇದೇ ಅವಧಿಯಲ್ಲಿ ಈ ಶುಲ್ಕವು ತಮಿಳುನಾಡು ರಾಜ್ಯದಲ್ಲಿ ಶೇ.9, ಕೇರಳ ಶೇ.10, ಆಂಧ್ರಪ್ರದೇಶ ಶೇ. 7.5,ತೆಲಂಗಾಣ ರಾಜ್ಯಗಳು ಶೇ.7.5 ರಷ್ಟು ಶುಲ್ಕ ಆಕರಿಸುತ್ತಿವೆ.

ದಸ್ತಾವೇಜುಗಳ ಮೇಲಿನ ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕಗಳನ್ನು ಇತರೆ ರಾಜ್ಯಗಳೊಂದಿಗೆ ಸಮೀಕರಿಸಿಗೊಳ್ಳಲು (ಖಚಿಣುಠಟಿಚಿಟ್ಲುಚಿಣುಠಟಿ) ಆಡಳಿತಾತ್ಮಕ ಪ್ರಕ್ರಿಯೆಗಳನ್ನು ಬಲಪಡಿಸಲು ಮತ್ತು ನಾಗರಿಕರಿಗೆ ಉತ್ತಮ ಹಾಗೂ ಪರಿಣಾಮಕಾರಿ ಸೇವೆಯನ್ನು ನೀಡಲು.

ರಾಜ್ಯ ಸರ್ಕಾರವು ದಿನಾಂಕ: 31–08–2025 ರಿಂದ ಜಾರಿಗೆ ಬರುವಂತೆ ನೋಂದಣಿ ಶುಲ್ಕವನ್ನು ಶೇಕಡ 1 ರಿಂದ ಶೇ.2 ರಷ್ಟು ಪರಿಷ್ಕರಿಸಿದೆ.ಪರಿಷ್ಕೃತ ನೋಂದಣಿ ಶುಲ್ಕವನ್ನು ಸುಗಮವಾಗಿ ಇಲಾಖೆಯ ಅಧಿಕೃತ ಪೋರ್ಟಲ್ ಮೂಲಕ ಪಾವತಿಸಲು ಹಿಂದಿನ ನೋಂದಣಿ ಶುಲ್ಕವನ್ನು ಪಾವತಿಸಿ ಈಗಾಗಲೇ ದಸ್ತಾವೇಜುಗಳ ನೋಂದಣಿಗೆ ಅಪಾಯಿಂಟ್‌ಮೆಂಟ್ ಪಡೆದಿರುವವರು ಅಥವಾ ಶುಲ್ಕವನ್ನು ಪಾವತಿಸಿ ಅಪಾಯಿಂಟ್‌ಮೆಂಟ್ ಪಡೆಯದಿರುವವರು, ವ್ಯತ್ಯಾಸದ ಮೊತ್ತವನ್ನು ಇಲಾಖೆಯ ಅಧಿಕೃತ ಪೋರ್ಟಲ್ ಮೂಲಕ




ಪಾವತಿಸಬೇಕು. ಮೊದಲು ಬಳಸಿದ ಲಾಗಿನ್ ಮೂಲಕವೇ ಈ ಪಾವತಿಯನ್ನು ಮಾಡಬೇಕು. ಅರ್ಜಿದಾರರಿಗೆ ನೆರವಾಗುವ ದೃಷ್ಟಿಯಿಂದ ಅಗತ್ಯ ಸೂಚನೆಗಳನ್ನು ಒಳಗೊಂಡ ಎಸ್‌ಎಂಎಸ್ ನೇರವಾಗಿ ಅವರ ನೋಂದಾಯಿತ ಮೊಬೈಲ್ ಸಂಖ್ಯೆಗೆ ಕಳುಹಿಸಲಾಗುವುದು.

ಈಗಾಗಲೇ ದಸ್ತಾವೇಜುಗಳ ನೋಂದಣಿಗೆ ಸಲ್ಲಿಸಲಾಗಿರುವ ಹಾಗೂ ಪರಿಶೀಲನೆಯಲ್ಲಿರುವ ದಸ್ತಾವೇಜುಗಳಿಗೆ ನೋಂದಣಿ ಶುಲ್ಕವನ್ನು ಮರು ಲೆಕ್ಕ ಹಾಕಲಾಗುವುದು ಮತ್ತು ಪರಿಷ್ಕೃತ ಶೇಕಡ 2 ರಂತೆ ನೋಂದಣಿ ಶುಲ್ಕವನ್ನು ಪಾವತಿಸಬೇಕಾಗುತ್ತದೆ. ಈ ವರ್ಗದ ಅರ್ಜಿದಾರರಿಗೆ ಪಾವತಿಯು ಪ್ರಕ್ರಿಯೆ ಪೂರ್ಣಗೊಳ್ಳುವ ಮೊದಲು ಪರಿಷ್ಕೃತ ನೋಂದಣಿ ಶುಲ್ಕದ ವಿವರವನ್ನು ತಿಳಿಸಲಾಗುವುದು.

ಇಲಾಖೆಯು ದಸ್ತಾವೇಜುಗಳ ನೋಂದಣಿ ಪ್ರಕ್ರಿಯೆಯಲ್ಲಿ ವಿಳಂಬವಾಗುವುದನ್ನು ತಪ್ಪಿಸಲು ಎಲ್ಲಾ ಅರ್ಜಿದಾರರಿಗೆ ಮೇಲ್ಕಾಣಿಸಿದ ನವೀಕರಿಸಿದ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ತಿಳಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಹಂತ ಹಂತವಾಗಿ ಅನುಸರಿಸಬಹುದಾದ ವಿವರವಾದ ಸೂಚನೆಗಳನ್ನು ಇಲಾಖೆಯ ಅಧಿಕೃತ ಪೋರ್ಟಲ್‌ನಲ್ಲಿ ಲಭ್ಯವಾಗುವಂತೆ ಕಲ್ಪಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

# ಭಾನುಮುಸ್ತಾಕ್ ಆಹ್ವಾನ ಸಮಯೋಚಿತ

**ಬೆಂಗಳೂರು,ಆ.30–**ದಸರಾ ಉದ್ಘಾಟನೆಗೆ ಸಾಹಿತಿ ಭಾನುಮುಸ್ತಾಕ್ ಅವರನ್ನು ಆಹ್ವಾನಿಸಿರುವ ರಾಜ್ಯಸರ್ಕಾರದ ತೀರ್ಮಾನ ಸಮಯೋಚಿತವಾಗಿದೆ. ಇದನ್ನು ವಿವಾದ ಮಾಡುತ್ತಿರುವ ಕೆಟ್ಟ ಮನಸ್ಸುಗಳು ನಮ್ಮ ಸಮಾಜದಲ್ಲಿರುವುದು ದುರಂತ ಎಂದು ರಾಜ್ಯಸಭೆಯ ಮಾಜಿ ಸದಸ್ಯ, ಸಾಹಿತಿ ಎಲ್. ಹನುಮಂತಯ್ಯ ಹೇಳಿದರು.

ಕೆಪಿಸಿಸಿ ಕಚೇರಿಯಲ್ಲಿಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾಹಿತಿ ಭಾನುಮುಸ್ತಾಕ್ ನಾಡಿಗೆ ಹೆಮ್ಮೆ ತರುವಂತಹ ಕೆಲಸ ಮಾಡಿದ್ದಾರೆ. ಇಂತವರನ್ನು ದಸರಾ ಉದ್ಘಾಟನೆಗೆ ಕರೆದಿರುವುದನ್ನು ವಿವಾದ ಮಾಡುತ್ತಿರುವುದು ಸರಿಯಲ್ಲ. ಬಿಜೆಪಿಯಾಗಲಿ, ಆರ್‌ಎಸ್‌ಎಸ್ ಆಗಲಿ ಈ ವಿಚಾರವನ್ನು ವಿವಾದ ಮಾಡುತ್ತಿರುವುದು ಅವರಿಗೆ ಶೋಭೆ ತರಲ್ಲ ಎಂದು ಹೇಳಿದರು.

ನಾಡಹಬ್ಬ ದಸರಾದಲ್ಲಿ ಸಂಗೀತಗಾರರು, ಕುಸ್ತಿ ಪಟುಗಳು, ಕಲಾವಿದರು ಎಲ್ಲರನ್ನೂ ಜಾತ್ಯಾತೀತವಾಗಿ, ಧರ್ಮಾತೀತವಾಗಿ ಆಹ್ವಾನಿಸುತ್ತೇವೆ. ಹೀಗಿರುವಾಗ ದಸರಾ ಉತ್ಸವಕ್ಕೆ ಭಾನುಮುಸ್ತಾಕ್ ಅವರನ್ನು ಆಹ್ವಾನಿಸಿರುವುದನ್ನು ವಿವಾದ ಮಾಡುತ್ತಿರುವುದು



ಶೋಭೆ ತರಲ್ಲ, ನಾಗರೀಕ ಸಮಾಜ ಗಟ್ಟಿಯಾಗಿ ಭಾನುಮುಸ್ತಾಕ್ ಪರ ನಿಲ್ಲಬೇಕಾಗಿದೆಎಂದರು.

ದಸರಾ ಉದ್ಘಾಟನೆಯಲ್ಲಿ ಧರ್ಮದ ಅಮಲು ತುಂಬಿ ಸಮಾಜ ವಿಭಜಿಸುತ್ತಿರುವ ಶಕ್ತಿಗಳ ನಡುವೆ ನಾವೆಲ್ಲ ಒಟ್ಟಾಗಿ ಭಾನುಮುಸ್ತಾಕ್ ಪರನಿಲ್ಲೋಣ ಎಂದು ಹೇಳಿದ ಅವರು, ಭಾನುಮುಸ್ತಾಕ್ ಸಹ ಇಂತಹ ಯಾವುದೇ ಮತೀಯ ಶಕ್ತಿಗಳಿಗೆ ಎದೆಗುಂದದೆ ದಸರಾ ಉದ್ಘಾಟನೆಯಲ್ಲಿ ಭಾಗಿಯಾಗಬೇಕು.ನಾಗರಿಕ ಸಮಾಜ ಅವರ ಜತೆ ಇದೆ ಎಂದು ಎಲ್. ಹನುಮಂತಯ್ಯ ಹೇಳಿದರು.

# ಜಾತಿ ಕಾಲಂನಲ್ಲಿ "ಆದಿಬಣಜಿಗ" ಎಂದು ಬರೆಸಲು ಮನವಿ

**ಕಲಬುರಗಿ,ಆ.30–**ಮುಂಬರುವ ಜನಗಣತಿ ಜಾತಿ ಕಾಲಂ 8 ರಲ್ಲಿದ್ದಂತೆ " ಆದಿಬಣಜಿಗ " ಮಾತ್ರ ಬರೆಯಿಸಬೇಕೆಂದು ಗುಲಬರ್ಗಾ ಜಿಲ್ಲಾ ಆದಿ ಬಣಜಿಗ ಸಮಾಜ ಮನವಿ ಮಾಡಿದೆ.

ಈ ಸಂಬಂಧ ಗುಲಬರ್ಗಾ ಜಿಲ್ಲಾ ಆದಿಬಣಜಿಗ ಸಮಾಜದ 'ವರೆಲ್ಲ ಸಭೆ ಸೇರಿ ಬೆಂಗಳೂರಿನಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾದ ಮಧುಸೂದನ ನಾಯ್ಕ ಅವರಿಗೆ ಮನವಿ ಪತ್ರ ಸಲ್ಲಿಸಿದ್ದಾರೆ.ಅದರಂತೆ ಕಲ್ಯಾಣ ಕರ್ನಾಟಕ, ಉತ್ತರ ಕರ್ನಾಟಕ ಭಾಗದ ಸಮಾಜ ಬಾಂಧವರು ಲಿಂಗಾಯತ ಬಣಜಿಗ, ಲಿಂಗಾಯತ ಆದಿಬಣಜಿಗ ಎಂದು ಬರೆಯಿಸದೆ ಕೇವಲ " ಆದಿಬಣಜಿಗ " ಎಂದು ಬರೆಯಿಸಬೇಕು ಎಂದು ಸಮಾಜದ ಗೌರವಾಧ್ಯಕ್ಷರಾದ ಡಾ.ಬಸವರಾಜ ಕೊನೇಕ್ ಹಾಗೂ ಅಧ್ಯಕ್ಷರಾದ ಶಿವಪುತ್ರಪ್ಪ ಬರೂಡೆ ಮನವಿ ಮಾಡಿದ್ದಾರೆ.ಇದರಿಂದ ಕರ್ನಾಟಕದಲ್ಲಿ ಆದಿಬಣಜಿಗ ಜನ ಸಂಖ್ಯೆ ಎಷ್ಟಿದೆ ಎಂಬುವುದರ ನಿರ್ದಿಷ್ಟ ಹಾಗೂ ಖಚಿತ ಮಾಹಿತಿ ದೊರೆಯುತ್ತದೆ. ಆದ್ದರಿಂದ ಸಮಾಜ ಬಾಂಧವರು ಜಾತಿ ಕಾಲಂ 8ರಲ್ಲಿ ಇದ್ದಂತೆ " ಆದಿಬಣಜಿಗ" ಎಂದು ಬರೆಯಿಸಬೇಕು ಎಂದು ಅವರು ತಿಳಿಸಿದ್ದಾರೆ.

# ಯೂರಿಯಾ ರಸಗೊಬ್ಬರ ಜಿಲ್ಲೆಯಲ್ಲಿ ಲಭ್ಯ: ಪ್ರಕಾಶ್ ಚವ್ಹಾಣ್

**ರಾಯಚೂರು,ಆ.30–** ಕೃಷಿ ಇಲಾಖೆಯಿಂದ 2025–26 ಸಾಲಿನ ಮುಂಗಾರು ಹಂಗಾಮಿಗೆ ಜಿಲ್ಲೆಗೆ ನಿಗದಿಪಡಿಸಿದ ಗುರಿಯಂತೆ ಯೂರಿಯಾ ರಸಗೊಬ್ಬರ ಜಿಲ್ಲೆಗೆ ಬರುತ್ತಿದ್ದು, ರಸಗೊಬ್ಬರದ ಕೊರತೆ ಬಗ್ಗೆ ರೈತರು ಆತಂಕಪಡುವ ಅವಶ್ಯಕತೆ ಇರುವುದಿಲ್ಲ ಎಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ಪ್ರಕಾಶ್ ಚಹಾಣ್ ಅವರು ತಿಳಿಸಿದ್ದಾರೆ.

ಬಿ.ಅಮರನಾಥ ಕಂಪನಿ ಬಳಗಾನೂರು–27, ಶ್ರೀಮಾರುತಿ ಎಂಟರ್‌ಪ್ರೈಸಸ್ ಜವಲಗೇರಾ–9, ಅನ್ನಪೂರ್ಣೇಶ್ವರಿ ಆಗ್ರೋ ಟ್ರೇಡಿಂಗ್ ಕಂಪನಿ ಬ್ಯಾಗವಾಟ್–36, ರಾಮಕೃಷ್ಣ ಫರ್ಟಿಲೈಜರ್ಸ್ ಚಾಗಭಾವಿ ಕ್ಯಾಂಪ–9, ಶ್ರೀರಾಮ ಏಜೆನ್ಸಿಸ್ ಜಲಾಪುರ ಕ್ಯಾಂಪ್–9, ಶ್ರೀಸುಗೂರೇಶ್ವರ ಆಗ್ರೋ ಏಜೆನ್ಸಿಸ್ ದೇವದುರ್ಗ–9, ಬಸವೇಶ್ವರ ಕೃಷಿ ಸೇವಾ ಕೇಂದ್ರ ದೇವದುರ್ಗ–9, ಶ್ರೀವೆಂಕಟನಾಗ ದೇವಿ ಎಂಟರ್‌ಪ್ರೈಸಸ್ ಮಲ್ಕಾಪುರಿ ಕ್ಯಾಂಪ್–9, ಶ್ರೀರಾಘವೇಂದ್ರ ಎಂಟರ್‌ಪ್ರೈಸಸ್ ಮಲ್ಕಾಪುರಿ ಕ್ಯಾಂಪ್–9, ಆಗ್ರೋ ಯೂನಿಯನ್ ಎಂಟರ್‌ಪ್ರೈಸಸ್ ಇಡಪನೂರು–18, ಬಂದೇನವಾಜ್ ಟ್ರೇಡಿಂಗ್ ಕಂಪನಿ ಸಿಂಧನೂರು–18, ಲಕ್ಷ್ಮಿ ಟ್ರೇಡರ್ಸ್ ಕೆ.ಹಂಚಿನಾಳ ಕ್ಯಾಂಪ್–9, ಸುಬ್ರಮಣ್ಯಂ ಟ್ರೇಡರ್ಸ್ ಕೆ.ಹಂಚಿನಾಳ ಕ್ಯಾಂಪ್–9, ಶ್ರೀಮಲ್ಲಿಕಾರ್ಜುನ ಕೃಷಿ ಸೇವಾ ಕೇಂದ್ರ ಜಾಲಹಳ್ಳಿ–18, ಶ್ರೀ ಮೂರ್ತಿ ಟ್ರೇಡರ್ಸ್ ಕವಿತಾಳ–18, ಶ್ರೀ ಮೂರ್ತಿ ಟ್ರೇಡರ್ಸ್ ಕವಿತಾಳ–9, ವರಲಕ್ಷ್ಮಿ ಫರ್ಟಿಲೈಜರ್ಸ್ ಕವಿತಾಳ–9, ಶ್ರೀ ವಿಜಯ ಮಹಾಂತೇಶ್ವರ ಟ್ರೇಡರ್ಸ್ ಲಿಂಗಸುಗೂರು–9, ಶ್ರೀಅಮರೇಶ್ವರ ಆಗ್ರೋ ಕೇಂದ್ರ ಲಿಂಗಸುಗೂರು–4.5, ಶ್ರೀ ಬಸವೇಶ್ವರ ಆಗ್ರೋ ಕೇಂದ್ರ ಲಿಂಗಸುಗೂರು–4.5, ಶ್ರೀ ವೆಂಕಟೇಶ್ವರ ಟ್ರೇಡರ್ಸ್ ಮಾನ್ವಿ–9, ಮಾನಸ ಆಗ್ರೋ ಏಜೆನ್ಸಿಸ್ ಮಾನ್ವಿ–9, ಶ್ರೀ ವಿಜಯಲಕ್ಷ್ಮಿ ಟ್ರೇಡರ್ಸ್ ಮಾನ್ವಿ–13.5, ಕೋದಂಡರಾಮ ಟ್ರೇಡರ್ಸ್ ಮಾನ್ವಿ–4.5, ಆರ್ ವಿಠ್ಠಲ ಸೆಟ್ಟಿ ಮತ್ತು ಸನ್ಸ್ ಮಾನ್ವಿ –13.5, ಆರ್.ಸತ್ಯನಾರಾಯಣ ರಮೇಶ್ ಬಾಬು ಮಾನ್ವಿ–4.5, ವೆಂಕಟ ಸಾಯಿ ಟ್ರೇಡರ್ಸ್ ಮಾನ್ವಿ–9, ಶ್ರೀ ಸೂಗುರೇಶ್ವರ ಟ್ರೇಡರ್ಸ್ ಮಾನ್ವಿ–9, ಶ್ರೀ ಮಲ್ಲಿಕಾರ್ಜುನ ಟ್ರೇಡಿಂಗ್ ಕಂಪನಿ ಮಸ್ಕಿ–9, ಶ್ರೀ ವಿಜಯ ಮಹಾಂತೇಶ ಟ್ರೇಡರ್ಸ್ ಮಸ್ಕಿ–9, ಶ್ರೀ ಭಾಗ್ಯಲಕ್ಷ್ಮಿ ಟ್ರೇಡಿಂಗ್ ಕಂಪನಿ ಮಸ್ಕಿ–9, ಶ್ರೀಗವಿಸಿದ್ದೇಶ್ವರ ಟ್ರೇಡರ್ಸ್ ಮಸ್ಕಿ–9,ಶ್ರೀಬದರಿನಾಥ್ ಟ್ರೇಡರ್ಸ್ ಮುದ್ಗಲ್–9, ಶ್ರೀ ಬಾಲಾಜಿ ಕೃಷಿ ಕೇಂದ್ರ ಲಿಂಗಸುಗೂರು–9, ವೀಣಾ ಎಂಟರ್‌ಪ್ರೈಸಸ್ ರಾಯಚೂರು–18, ಸಂಜೀವರಾಯ ಫರ್ಟಿಲೈಜರ್ಸ್ ರಾಯಚೂರು–13.5, ಸಾಗರ್ ಎಂಟರ್‌ಪ್ರೈಸಸ್ ರಾಯಚೂರು–13.5, ಜಿ ಆದಿನಾರಾಯಣ ಸೆಟ್ಟಿ ಮತ್ತು ಸನ್ಸ್ ರಾಯಚೂರು–38.24, ಶ್ರೀಕನ್ಯಕಾ ಪರಮೇಶ್ವರಿ ಆಗ್ರೋ ಮಾರ್ಟ್ ರಾಯಚೂರು–13.5, ಶ್ರೀ ಪ್ರಸನ್ನ ಲಕ್ಷ್ಮಿ ಎಂಟರ್‌ಪ್ರೈಸಸ್ ರಾಯಚೂರು–13.5, ಮಂಜು ಆಗ್ರೋ ಏಜೆನ್ಸಿಸ್ ರಾಯಚೂರು–41.85, ಶ್ರೀರಾಘವೇಂದ್ರ ಆಗ್ರೋ ಮಾರ್ಟ್ ರಾಯಚೂರು–13.5, ಗುರು ರಾಘವೇಂದ್ರ ಟ್ರೇಡಿಂಗ್ ಕಂಪನಿ ಸಿಂಧನೂರು–9, ಮಹಾವೀರ್ ಏಜೆನ್ಸಿಸ್ ಸಿಂಧನೂರು–9, ಚೌದರಿ ಆಗ್ರೋ ಏಜೆನ್ಸಿಸ್ ಸಿಂಧನೂರು–9, ಶ್ರೀ ಮಹಾಲಕ್ಷ್ಮಿ ಏಜೆನ್ಸಿಸ್ ಸಿಂಧನೂರು–9,ಅಭಯ್ ಆಗ್ರೋ ಏಜೆನ್ಸಿಗಳು ಸಿಂಧನೂರು–9, ಅಂಬಿಕಾ ಟ್ರೇಡಿಂಗ್ ಕಂಪನಿ ಸಿಂಧನೂರು–9, ಪಾರಸ್ ಟ್ರೇಡರ್ಸ್ ಸಿಂಧನೂರು–9, ಶ್ರೀ ಸೂಗುರೇಶ್ವರ ಟ್ರೇಡರ್ಸ್ ಸಿಂಧನೂರು–9, ಶ್ರೀ ತಿರುಮಲ ಎಂಟರ್ ಪ್ರೈಸಸ್ ಸಿಂಧನೂರು–9, ಶ್ರೀ ಸತ್ಯನಾರಾಯಣ ಏಜೆನ್ಸಿಸ್ ಸಿಂಧನೂರು–9,ಕೆ ಸತ್ಯನಾರಾಯಣ ಮತ್ತು ಸನ್ಸ್ ಸಿಂಧನೂರು–18, ಆಗ್ರೋ ಯೂನಿಯನ್ ಎಂಟರ್‌ಪ್ರೈಸಸ್ ರಾಯಚೂರು–18, ಪಾರ್ವತಿ ಫರ್ಟಿಲೈಜರ್ಸ್ ಲಕ್ಕಂದಿನ್ನಿ–9, ಗಣೇಕಲ್ ಬಂಡಿ ವೀರುಪನ ಗೌಡ ಅಗ್ರೋ ಏಜೆನ್ಸಿ ಸಿರವಾರ–9, ಭೂಮಿ ಟ್ರೇಡರ್ಸ್ ಸಿರವಾರ–18, ಶ್ರೀ ಶಂಕರ್ ಫರ್ಟಿಲೈಜರ್ಸ್ ತುರ್ವಿಹಾಲ್–4.5, ಶರಣ ಬಸವೇಶ್ವರ ಟ್ರೇಡರ್ಸ್ ತುರ್ವಿಹಾಲ್–13.5, ಬಂದೇನವಾಜ್ & ಕಂಪನಿ–(ಸಿಂಧನೂರು) ಮುಳ್ಳೂರು ಕ್ಯಾಂಪ್–18, ಹನುಮಾನ್ ಟ್ರೇಡರ್ಸ್ ಗಬ್ಬೂರು–18, ಬಸವೇಶ್ವರ ಕೃಷಿ ದೇವದುರ್ಗ–9, ಭೂಮಿ ಟ್ರೇಡರ್ಸ್ ಸಿರವಾರ–13.05, ದೇವಿ ಎಂಟರ್‌ಪ್ರೈಸಸ್ (ಜಾಲಿಹಾಳ್) ಕೆ.ದುರ್ಗಾ ಕ್ಯಾಂಪ್–18, ಧನುಷ್ ಆಗ್ರೋ ಏಜೆನ್ಸೀಸ್ ರಾಯಚೂರು–19.755, ಗಣೇಕಲ್ ಬಂಡಿ ವಿರೂಪನ್ ಗೌಡ ಆಗ್ರೋ ಆಗ್ ಸಿರವಾರ–13.05, ಲಕ್ಷ್ಮೀ ವೆಂಕಟೇಶ್ವರ ಟ್ರೇಡಿಂಗ್ ಕೋ ಜಂಗಮರಳ್ಳಿ–18, ಬಸವ ಟ್ರೇಡರ್ಸ್ ಚಾಗಭಾವಿ–18, ಬಸವೇಶ್ವರ ಟ್ರೇಡರ್ಸ್ ಕವಿತಾಳ್–18, ಕೆ.ಸತ್ಯನಾರಾಯಣ ಮತ್ತು ಸನ್ಸ್ ಸಿಂಧನೂರು–9, ಕೋದಂಡರಾಮ ಟ್ರೇಡರ್ಸ್ ಮಾನ್ವಿ–9, ಪಿಎಸಿಎಸ್ ಹಾಲಾಪುರ –18, ಪಿಎಸಿಎಸ್ ಎನ್.ಹೊಸೂರು–18, ಪ್ರಸನ್ನ ಲಕ್ಷ್ಮಿ ಎಂಟರ್‌ಪ್ರೈಸಸ್ ರಾಯಚೂರು –6.525, ಕ್ವಾಲಿಟಿ ರಸಗೊಬ್ಬರಗಳು ದೇವಸುಗೂರು–9, ಆರ್‌ಎಪಿಸಿಎಮ್‌ಎಸ್ ರಾಯಚೂರು–39.15, ಸಾಗರ್ ಎಂಟರ್‌ಪ್ರೈಸಸ್ ರಾಯಚೂರು–13.05, ಸಾಯಿರಾಂ ಟ್ರೇಡರಿಂಗ್ ಕಂಪನಿ ಜಾಲಹಾಲ್–9, ಶ್ರೀ ಕುಮಾರ್ ಎಂಟರ್‌ಪ್ರೈಸಸ್ ಸಾಯಿ ಕ್ಯಾಂಪ್–9, ಶ್ರೀ ಲಕ್ಷ್ಮೀ ಬಾಲಾಜಿ ಟ್ರೇಡಿಂಗ್ ಕಂಪನಿ ಮಾನ್ವಿ–27, ಶ್ರೀ ಮಲ್ಲಿಕಾರ್ಜುನ ಕೃಷಿ ಸೇವಾ ಕೇಂದ್ರ ಜಾಲಹಳ್ಳಿ–9, ಶ್ರೀ ರಾಘವೇಂದ್ರ ಎಂಟರ್‌ಪ್ರೈಸಸ್ – (ಗೊರೆಬ್) ಮಲ್ಕಾಪುರ್–9, ಶ್ರೀಶಿವ ಸಾಯಿ ಟ್ರೇಡರ್ಸ್ (ಮಾನ್ವಿ) ಸಾಯಿಕ್ಯಾಂಪ್–9, ಶ್ರೀ ವೆಂಕಟರಮಣ ಟ್ರೇಡರ್ಸ್(ಮಾನ್ವಿ) ಬಿಬಿ ಕ್ಯಾಂಪ್–9, ಶ್ರೀ ವೆಂಕಟೇಶ್ವರ ಟ್ರೇಡರ್ಸ್ ಗಬ್ಬೂರು–9, ಶ್ರೀನಿವಾಸ ಆಗ್ರೋ ಏಜೆನ್ಸಿ (ಸಿಂಧನೂರು) ಮುದ್ದಾಪುರ–18, ಖಿಂಕಅಒಖ ಸಿಂಧನೂರು–18, ವಿಜಯಲಕ್ಷ್ಮಿ ಆಗ್ರೋ ಏಜೆನ್ಸಿ (ಮಾನ್ವಿ) ಕೆ.ಗುಡುದಿನ್ನಿ ಕ್ಯಾಂಪ್–18, ಪಿಎಸಿಎಸ್ ಬುಡಿವಾಲ್–18, ಪಿಎಸಿಎಸ್ ಟಿಡಿಗೋಲ್–18, ಪಿಎಸಿಎಸ್ ಸಾಲಗುಂದ–18, ಪಿಎಸಿಎಸ್ ಉದ್ಬಾಲ್ (ಗ)–18, ಪಿಎಸಿಎಸ್ ಗುಡದೂರು–18, ಪಿಎಸಿಎಸ್ ತೋರಣದಿನ್ನಿ–18, ತಾಲೂಕಾ ಸಂಸ್ಕಾರ ಸಿಂಧನೂರು–18, ಧನ ಲಕ್ಷ್ಮಿ ಎಂಟರ್‌ಪ್ರೈಸಸ್ ರಾಯಚೂರು –6.525, ಗಣೇಶ್ ಟ್ರೇಡರ್ಸ್ – ಬಿ.ಬಿ ಕ್ಯಾಂಪ್–9, ಗಾಯತ್ರಿ ಶ್ರೀ ಆಗ್ರೋ ಟ್ರೇಡರ್ಸ್ –(ರಾಯಚೂರು) ರಂಗಾಪುರ ಕ್ಯಾಂಪ್–9, ಗಾಯತ್ರಿ ಟ್ರೇಡರ್ಸ್ ಗಾಂಧಿನಗರ–9, ಸಪ್ತಗಿರಿ ಎಂಟರ್‌ಪ್ರೈಸಸ್ (ರಾಯಚೂರು) ಯರ್ಮಾರ್ಸ್–9, ಸತ್ಯನಾರಾಯಣ ರಮೇಶ್ ಬಾಬು ಮಾನ್ವಿ–9, ಶ್ರೀ ರಾಘವೇಂದ್ರ ಫರ್ಟ್ ಮತ್ತು ಪೆಸ್ಟ್. ಭಾಗ್ಯನಗರ ಕ್ಯಾಂಪ್–9.9, ಶ್ರೀ ಅಕ್ಷಯ ಟ್ರೇಡರ್ಸ್ ರಾಯಚೂರು–6.525, ಶ್ರೀ ಅಕ್ಷ್ಯಾಂಬರ ಟ್ರೇಡರ್ಸ್  ಗೊರೇಬಾಳ–9, ಶ್ರೀ ಅಮರೇಶ್ವರ ಟ್ರೇಡರ್ಸ್ ಬಾಗಲವಾಡ–9, ಶ್ರೀ ಬಾಲಾಜಿ ಫರ್ಟಿಲೈಸರ್ಸ್ (ಸಿಂಧನೂರು) ಯು ಹಂಚಿನಾಳ್ ಕ್ಯಾಂಪ–18, ಶ್ರೀ ದುರ್ಗಾ ಎಂಟರ್‌ಪ್ರೈಸಸ್ – ಗಾಂಧಿ ನಗರ–9, ಶ್ರೀ ಗೌರಿ ಶಂಕರ್ ಆಗ್ರೋ ಏಜೆನ್ಸೀಸ್–6.525, ಶ್ರೀ ಲಕ್ಷ್ಮೀ ವೆಂಕಟೇಶ್ವರ ಗಬ್ಬೂರು–9, ಶ್ರೀ ಲಕ್ಷ್ಮೀ ಶ್ರೀನಿವಾಸ ಟ್ರೇಡರ್ಸ್ ರಾಯಚೂರು–13.05, ಶ್ರೀ ಲಕ್ಷ್ಮೀ ವೆಂಕಟೇಶ್ವರ ಕೃಷಿ ಕೇಂದ್ರ ಪೋತ್ನಾಳ್–18, ಶ್ರೀಮಲ್ಲಿಕಾರ್ಜುನ ಟ್ರೇಡರ್ಸ್ ಬಾಗಲವಡ–9, ಶ್ರೀ ರಾಘವೇಂದ್ರ ಎಂಟರ್‌ಪ್ರೈಸಸ್ ಪೋತ್ನಾಳ್–9, ಶ್ರೀ ಸತ್ಯನಾರಾಯಣ ಟ್ರೇಡರ್ಸ್ ಕವಿತಾಳ–9, ಶ್ರೀ ಸೂಗೂರೇಶ್ವರ ಟ್ರೇಡರ್ಸ್ ಮಾನ್ವಿ–9, ಶ್ರೀ ವಿನಾಯಕ ಟ್ರೇಡರ್ಸ್ ಗಾಂಧಿನಗರ–9, ಸೃಷ್ಟಿ ಎಂಟರ್‌ಪ್ರೈಸಸ್ ಭೋಗಾವತಿ–9, ವರಲಕ್ಷ್ಮಿ ಫರ್ಟಿಲೈಜರ್ಸ್ ಕವಿತಾಳ–9, ವೀರೇಶ್ವರ ಆಗ್ರೋ ಏಜೆನ್ಸಿ ಗೊರೇಬಾಳ–18, ವೆಂಕಟ್ ಸಾಯಿ ಟ್ರೇಡರ್ಸ್ ಮಾನ್ವಿ–9, ಅಕ್ಕಿನ ಅಗ್ರೋ ಏಜೆನ್ಸೀಸ್ ತುರ್ವಿಹಾಲ್–18, ಬಸವ ಟ್ರೇಡರ್ಸ್ ದೇವದುರ್ಗ–9, ರಾಜು ಟ್ರೇಡರ್ಸ್ ಬಿ.ಕ್ಯಾಂಪ್–18, ಶ್ರೀ ಬಾಲಾಜಿ ಎಂಟರ್‌ಪ್ರೈಸಸ್ ಭೂತಲದಿನ್ನಿ–9, ಶ್ರೀ ವೆಂಕಟೇಶ್ವರ ಟ್ರೇಡರ್ಸ್ ಬೂದಿಹಾಳ್–18, ಶ್ರೀ ಸಾಯಿ ಹನುಮಾನ್ ಟ್ರೇಡರ್ಸ್ ಬಾಳೆಗಿಡ್ಕ್ಯಾಂಪ್–18, ಲಕ್ಷ್ಮೀ ವೆಂಕಟೇಶ್ವರ ಕೃಷಿ ಕೇಂದ್ರ ಹೊಸಳ್ಳಿ–9, ಸಾಯಿ ಎಂಟರ್‌ಪ್ರೈಸಸ್ ಹಂಚಿನಾಳ ಕ್ಯಾಂಪ್–18, ಲಕ್ಷ್ಮೀ ಬಂಡಿ ರಂಗನಾಥ ರೌಡಗುಂದ–9, ಸೂಗೂರೇಶ್ವರ ಟ್ರೇಡರ್ಸ್ ಶಾಂತಿನಗರ–9, ರಾಜಮತಾ ಅಗ್ರೋ ಏಜೆನ್ಸಿ ಹಂಚಿನಾಳ ಕ್ಯಾಂಪ್–9, ಕನಕ ಲಕ್ಷ್ಮಿ ಟ್ರೇಡಿಂಗ್ ಕೋ ಚಾನಳ್ಳಿ–9, ಶಿವಬಸವ ಟ್ರೇಡರ್ಸ್ ಕೋ ಚನ್ನಳ್ಳಿ–9, ಬಸವ ಅಗ್ರೋ ಕೇಂದ್ರ ಚಿಕ್ಕಹೆಸರೂರು–9, ಶ್ರೀ ರಾಘವೇಂದ್ರ ಟ್ರೇಡರ್ಸ್ ಸಿಂಧನೂರು–18, ಶ್ರೀ ಗಾಯತ್ರಿ ಅಗ್ರೋ ಟ್ರೇಡರ್ಸ್ –9, ಶ್ರೀ ಭಾಗ್ಯ ಲಕ್ಷ್ಮಿ ಟ್ರೇಡರ್ಸ್ ಭೀಮರಾಜ–9, ಶ್ರೀ ವೀರಭದ್ರೇಶ್ವರ ಏಜೆನ್ಸೀಸ್ ಪೋತ್ನಾಳ್–9, ಆರ್ಯನ್ ಆಗ್ರೋ ಏಜೆನ್ಸೀಸ್ ದೇವದುರ್ಗ–9, ಶ್ರೀ ರಾಜಲಕ್ಷ್ಮಿ ಟ್ರೇಡರ್ಸ್ ಪೋತ್ನಾಳ್–9, ಮಂಜುನಾಥ ಅಗ್ರೋ ಕೇಂದ್ರ ಪೋತ್ನಾಳ್–9, ಜಿ ವಿ ಟ್ರೇಡರ್ಸ್ ಸಿಂಧನೂರು–9, ಅಖಿಲಾ ಏಜೆನ್ಸೀಸ್ ಮಾನ್ವಿ–18, ಸುಬ್ರಹ್ಮಣ್ಯ ಟ್ರೇಡರ್ಸ್ ಕೆ.ಹಂಚಿನಾಳ್ ಕ್ಯಾಂಪ–9, ಸುಬ್ರಹ್ಮಣ್ಯ ಟ್ರೇಡರ್ಸ್ ಕೆ.ಹಂಚಿನಾಳ್ ಕ್ಯಾಂಪ–18, ವೆಂಕಟೇಶ್ವರ ಏಜೆನ್ಸಿ ದೇವದುರ್ಗ–9, ಸಾಯಿ ಶ್ರೀ ಎಂಟರ್‌ಪ್ರೈಸಸ್ ಗಾಂಧಿನಗರ–9, ಶ್ರೀ ಹುಲಿಗೆಮ್ಮ ದೇವಿ ಟ್ರೇಡರ್ಸ್ ಮುಕ್ಕುಂದ–9, ಶ್ರೀ ಲಕ್ಷ್ಮೀ ವೆಂಕಟೇಶ್ವರ ಎಂಟರ್‌ಪ್ರೈಸಸ್ ಪೋತ್ನಾಳ್–9, ಶ್ರೀ ರಾಜಲಕ್ಷ್ಮಿ ಅರೋ ಏಜೆನ್ಸೀಸ್–ಮುಸ್ಟೂರ್ –9, ಕಿಸಾನ್ ಮಾಲ್ ರಾಯಚೂರು–6.525, ಶ್ರೀ ಪ್ರಜ್ವಾವಿ ಟ್ರೇಡರ್ಸ್ ಶ್ರೀನಿವಾಸ್ ಕ್ಯಾಂಪ್–18, ಶ್ರೀ ಶರಣಬಸವೇಶ್ವರ ಟ್ರೇಡರ್ಸ್ ಗಬ್ಬೂರು–9, ಯಾಸಿನ್ ಟ್ರೇಡರ್ಸ್ ಜಾಲಹಳ್ಳಿ–9, ಗಾಯತ್ರಿ ಎಂಟರ್‌ಪ್ರೈಸಸ್ 7ನೇ ಮೇಲ್ ಕ್ರಾಸ್, ಹುಣಸಿಹಾಳಹುಡ–9, ಶ್ರೀ ಅಮೋಘ ಸಿದ್ದೇಶ್ವರ ಕುರಿ ಸಂಗೋಪನೆ ಹಾಗೂ ಉಣ್ಣೆ ಉತ್ಪದಕರ ಸಹಕಾರ ಸಂಘ ಮಲ್ಲದಗುಡ್ಡ–18, ಶ್ರೀ ಶ್ರೀನಿವಾಸ ಟ್ರೇಡರ್ಸ್ ಪೋತ್ನಾಳ್–9, ಶ್ರೀ ವೆಂಕಟಸಾಯಿ ಟ್ರೇಡರ್ಸ್ ಸಾಯಿ ರಾಮನಗರ ಕ್ಯಾಂಪ್–9, ಮಣಿಕಂಠ ಟ್ರೇಡರ್ಸ್ ಬಾಗಲವಾಡ–18, ಬಸವಶ್ರೀ ಟ್ರೇಡರ್ಸ್ ತುರ್ವಿಹಾಳ್–18, ಪರಾಸ್ ಟ್ರೇಡರ್ಸ್ ಸಿಂಧನೂರ್–18, ತಿರುಮಲ ಎಂಟರ್‌ಪ್ರೈಸಸ್ ಸಿಂಧನೂರು–18, ಮಹಾಲಕ್ಷ್ಮಿ ಏಜೆನ್ಸಿಸ್ ಸಿಂಧನೂರು–18, ಅಗ್ರೋಸ್ ಸರ್ವಿಸ್ ಪ್ರೈವೇಟ್ ಲಿಮಿಟೆಡ್ ರಾಯಚೂರು–14.5 ಮೆಟ್ರೀಕ್ ಟನ್ ಯೂರಿಯಾ ಗೊಬ್ಬರವನ್ನು ಆಗಸ್ಟ್ 29ರಂದು ರೈತರಿಗೆ ವಿತರಿಸಲಾಗಿದೆ ಎಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪೊಲೀಸರ ಸೇವೆಗೆ ಗೃಹ ಸಚಿವ ಡಾ.ಜಿ ಪರಮೇಶ್ವರ್ ಪ್ರಶಂಸೆ

**ಬೆಂಗಳೂರು, ಆ.30–** ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆ ಪಾಲನೆಯಲ್ಲಿ ಪೊಲೀಸ್ ವ್ಯವಸ್ಥೆ ಉತ್ತಮವಾಗಿ ಕರ್ತವ್ಯ ನಿರ್ವಹಿಸಿದ್ದು, ಶೇ. 99ರಷ್ಟು ಕೊಲೆ ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ ಎಂದು ಗೃಹ ಸಚಿವ ಡಾ.ಜಿ ಪರಮೇಶ್ವರ್ ತಿಳಿಸಿದ್ದಾರೆ.

ವಿಶಿಷ್ಠ ಸೇವೆ ಸಲ್ಲಿಸಿದ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ರಾಜಭವನದಲ್ಲಿ ಪ್ರಶಸ್ತಿ ಪ್ರದಾನ ಮಾಡುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಕರ್ನಾಟಕದ ಪೊಲೀಸರಿಗೆ ದೇಶ ದಲ್ಲೆ ಉತ್ತಮ ವ್ಯವಸ್ಥೆ ಎಂಬ ಕೀರ್ತಿ ಇದೆ ಎಂದರು.

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹಾಗೂ ಸಮಾಜದಲ್ಲಿ ಶಾಂತಿ ಪಾಲನೆಯಲ್ಲಿ ಕಾನ್‌ಸ್ಟೆ?ಬಲ್‌ಗಳಿಂದ ಡಿಜಿಪಿಯವರೆಗೂ ಎಲ್ಲರೂ ಹಗಲಿರುಳು ಶ್ರಮಿಸುತ್ತಿದ್ದಾರೆ ಎಂದು ಶ್ಲಾಘಿಸಿದರು ಎಂದರು.

ಇತ್ತಿ?ಚೆಗೆ ನಡೆದ ಜಾಗತಿಕ ಬಂಡವಾಳ ಹೂಡಿಕೆ ದಾರರ ಸಮಾವೇಶದಲ್ಲಿ 10.5ಲಕ್ಷ ಕೋಟಿ ರೂ. ಬಂಡವಾಳ ಹೂಡಿಕೆಗೆ ವಿವಿಧ ದೇಶಗಳ ಉದ್ಯಮಿಗಳು ಮುಂದೆ ಬಂದಿದ್ದಾರೆ. ಯಾವುದೇ ದೇಶ ಅಥವಾ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಉತ್ತಮವಾಗಿದ್ದರೆ ಮಾತ್ರ ಬಂಡವಾಳ ಹೂಡಿಕೆ ಆಸಕ್ತಿಗಳು ಬರುತ್ತವೆ. ಇದಕ್ಕೆ ಪೊಲೀಸ್ ವ್ಯವಸ್ಥೆಯೇ ಕಾರಣ ಎಂದರು.

ಇತ್ತೆ?ಚೆಗೆ ಸಮಾಜದಲ್ಲಿ ಧಾರ್ಮಿಕವಾಗಿ, ರಾಜಕೀಯವಾಗಿ ಶಾಂತಿ ಕದಡುವ ಪ್ರಯತ್ನಗಳಾಗುತ್ತಿವೆ. ಪ್ರತಿ ಬಾರಿ ಅಂತಹ ಯತ್ನಗಳನ್ನು ಪೊಲೀಸರು ಯಶಸ್ವಿಯಾಗಿ ಹತ್ತಿಕ್ಕಿದ್ದಾರೆ. ಮುಖ್ಯಮಂತ್ರಿಯವರೇ ಗೃಹ ಇಲಾಖೆಯ ಬಗ್ಗೆ ಆಸಕ್ತಿವಹಿಸಿರುವುದರಿಂದ ಶೇ. 99 ರಷ್ಟು ಕೊಲೆ ಪ್ರಕರಣಗಳನ್ನು ಭೇದಿಸಲಾಗಿದೆ. ಸಾರ್ವಜನಿಕರ ನಿರೀಕ್ಷೆಗಳನ್ನು ಮೀರಿ ಪೊಲೀಸರು ಕೆಲಸ ಮಾಡಿದ್ದಾರೆ. ಟೀಕೆ ಟಿಪ್ಪಣಿಗಳನ್ನು ಸಕಾರಾತಕವಾಗಿ ತೆಗೆದುಕೊಂಡಿದ್ದೇವೆ ಎಂದು ಹೇಳಿದರು.

ಸೈಬರ್ ಅಪರಾಧಗಳನ್ನು ಕಡೆಗಣಿಸಿದರೆ, ಕೋಟ್ಯಂತರ ಜನರಿಗೆ ನಷ್ಟವಾಗಲಿದೆ. ಈ ನಿಟ್ಟಿನಲ್ಲಿ ಯಾವುದೇ ಠಾಣೆಯಲ್ಲಾದರೂ ಸೈಬರ್ ಅಪರಾಧಗಳನ್ನು ದಾಖಲಿಸುವ ಅವಕಾಶಗಳನ್ನು ಕಲ್ಪಿಸಲಾಗಿದ್ದು, ನಂತರ ಅವುಗಳನ್ನು ಸಂಬಂಧಪಟ್ಟ ಠಾಣೆಗಳಿಗೆ ವರ್ಗಾವಣೆ ಮಾಡಬಹುದಾಗಿದೆ ಎಂದರು.

ಪೊಲೀಸರು ಜೀವವನ್ನು ಪಣಕ್ಕಿಟ್ಟು ಕೆಲಸ ಮಾಡುತ್ತಿದ್ದಾರೆ. ಅಪರಾಧದ ವಿರುದ್ಧ ಕಾರ್ಯಾಚರಣೆ ವೇಳೆ ಆರೋಪಿಗಳು ಯಾವ ರೀತಿ ಪ್ರತಿಕ್ರಿಯಿಸುತ್ತಾರೆ ಎಂದು ಗೊತ್ತಿರುವುದಿಲ್ಲ. ಇಂತಹ ಸಂದರ್ಭದಲ್ಲಿ ಪ್ರಾಣಹಾನಿಯಾಗುವ ಸಾಧ್ಯತೆಯೂ ಇದೆ. ಕರ್ತವ್ಯ ನಿರ್ವಹಣೆಯಲ್ಲಿ ಜೀವ ಕಳೆದುಕೊಂಡ ಕುಟುಂಬಗಳಿಗೆ ಸಾಂತ್ವಾನ ಹೇಳುವುದಾಗಿ ತಿಳಿಸಿದರು.

ಇತ್ತಿ?ಚೆಗೆ ಮೈಸೂರು ರಸ್ತೆಯಲ್ಲಿ ಸಂಚಾರಿ ಠಾಣೆ ಪೇದೆಯೊಬ್ಬರು ಕೆಲಸ ನಿರ್ವಹಿಸುವಾಗ ತುಂಬು ಗರ್ಭಿಣಿಯೊಬ್ಬರು ರಸ್ತೆ ದಾಟಲು ಬಂದಿದ್ದರು. ಹೆರಿಗೆ ನೋವು ಆರಂಭವಾಯಿತು. ಹತ್ತಿರದಲ್ಲಿ ಆಸ್ಪತ್ರೆ ಇಲ್ಲದಿದ್ದಾಗ ಆಕೆಯನ್ನು ಪಕ್ಕದ ಮನೆಗೆ ಕರೆದುಕೊಂಡು ಹೋಗಿ ಹೆರಿಗೆ ಮಾಡಿಸಿ ತಾಯಿ–ಮಗುವನ್ನು ಸುರಕ್ಷಿತವಾಗಿ ಮನೆಗೆ ತಲುಪಿಸಿದ ಉದಾಹರಣೆ ಇದೆ. ಈ ರೀತಿಯ ಅನೇಕ ಘಟನೆಗಳು ನಮ ಕಣ್ಣ ಮುಂದಿವೆ ಎಂದರು.



ಪ್ರಶಸ್ತಿ ಪುರಸ್ಕೃತರು ಮುಂದಿನ ಪೀಳಿಗೆಗೆ ಆದರ್ಶ ಪ್ರಾಯರು. ಇದು ಕೇವಲ ಪದಕ ಅಲ್ಲ. ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಪ್ರಾಮಾಣಿಕತೆ, ಸಮಾಜ ಸೇವೆಗೆ ಸಂದ ಗೌರವ ಎಂದು ಕೊಂಡಾಡಿದರು.

ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಪದಕಗಳನ್ನು ಪ್ರದಾನ ಮಾಡಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಮುಖ್ಯಮಂತ್ರಿಯವರ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ, ಪೊಲೀಸ್ ಮಹಾನಿರ್ದೇಶಕ ಎಂ.ಎ. ಸಲೀಮ್, ಗೃಹ ಇಲಾಖೆ ಹೆಚ್ಚುವರಿ ಮುಖ್ಯಕಾರ್ಯದರ್ಶಿ ತುಷಾರ್ ಗಿರಿನಾಥ್ ಮತ್ತಿತರರು ಉಪಸ್ಥಿತರಿದ್ದರು.

ಯುವ ಮಾರ್ಗ

ಭಾನುವಾರ : 31–08–2025

## ಮಹಾತ್ಮ ಗಾಂಧೀ ಸೇವಾ ಪ್ರಶಸ್ತಿ ಕರ್ನಾಟಕ ಆಯ್ಕೆಗೆ ಅರ್ಜಿ ಆಹ್ವಾನ

**ರಾಯಚೂರು,ಆ.30–** ರಾಜ್ಯ ಸರ್ಕಾರವು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಲ್ಲಿ ಸ್ಥಾಪಿಸಿರುವ ಐದು ಲಕ್ಷ ರೂಪಾಯಿ ನಗದನ್ನು ಒಳಗೊಂಡ ಮಹಾತ್ಮಗಾಂಧೀ ಸೇವಾ ಪ್ರಶಸ್ತಿ ಕರ್ನಾಟಕಗೆ ಪ್ರಸಕ್ತ ಸಾಲಿಗೆ ಅರ್ಹ ಸಾಧಕರನ್ನು ಅಥವಾ ಸಂಘ ಸಂಸ್ಥೆಗಳನ್ನು ಆಯ್ಕೆ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸಾರ್ವಜನಿಕ ಜೀವನದಲ್ಲಿ ಮಹಾತ್ಮಗಾಂಧೀಜಿಯವರ ಆದರ್ಶಗಳನ್ನು ಅಳವಡಿಸಿಕೊಂಡು ಜೀವನ ನಡೆಸುತ್ತಿರುವ ಕನಿಷ್ಠ 60 ವರ್ಷಗಳಾಗಿರುವ ವ್ಯಕ್ತಿಗಳು ಅಥವಾ 25 ವರ್ಷಗಳು ತುಂಬಿರುವ ಸೇವಾ ಸಂಸ್ಥೆಗಳನ್ನು ಈ ಪ್ರಶಸ್ತಿಗೆ ಪರಿಗಣಿಸಲಾಗುವುದು.

ಮಹಾತ್ಮಗಾಂಧೀಜಿಯವರು ಪ್ರಚುರುಪಡಿಸಿದ ಜನಪರ ಕಾರ್ಯಕ್ರಮಗಳಾದ "ಅಸ್ಪೃಶ್ಯತೆ ನಿವಾರಣೆ". "ಅಹಿಂಸೆ", "ಮಹಿಳಾ ಸಬಲೀಕರಣ", "ಗ್ರಾಮೀಣ ನೈರ್ಮಲ್ಯ", "ಮದ್ಯಪಾನ ವಿರೋಧಿ ನೀತಿ", "ಖಾದಿ ಮತ್ತು ಸ್ವದೇಶಿ ವಸ್ತು ಬಳಕೆ", "ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಏಳಿಗೆ", ಈ ಕ್ಷೇತ್ರಗಳಲ್ಲಿ ಸ್ವಯಂ ಪ್ರೇರಣೆಯಿಂದ ತೊಡಗಿರುವ ವ್ಯಕ್ತಿಗಳು ಅಥವಾ ಸಂಸ್ಥೆಗಳು ಈ ಪ್ರಶಸ್ತಿಗೆ ಅರ್ಜಿ ಸಲ್ಲಿಸಬಹುದು. ಸಂಘ ಸಂಸ್ಥೆಗಳು ಅಥವಾ ವ್ಯಕ್ತಿಗಳು ಶಿಫಾರಸ್ಸನ್ನು ಕೂಡ ಮಾಡಬಹುದಾಗಿದೆ.

ಅರ್ಜಿಗಳನ್ನು 2025 ನೇ ಸೆಪ್ಟೆಂಬರ್ 19ರೊಳಗಾಗಿ ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ವಾರ್ತಾ ಸೌಧ. ನಂ. 17. ಭಗವಾನ್ ಮಹಾವೀರ ರಸ್ತೆ (ಇನ್‌ಫೆಂಟ್ರಿ ರಸ್ತೆ), ಬೆಂಗಳೂರು – 560 001 ಅಥವಾ ಇ – ಮೇಲ್ ವಿಳಾಸ: informationdiprawards@gmail.com ಹಾಗೂ ಖುದ್ದಾಗಿ ಇಲಾಖೆಗೆ ಕಳುಹಿಸಬಹುದಾಗಿದೆ ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸೆ.17ಕ್ಕೆ ಆಳಂದಕ್ಕೆ ಬಿ ವೈ ವಿಜೇಯೇಂದ್ರ



**ಆಳಂದ ಪಟ್ಟಣದಲ್ಲಿ ಸೆ. 17ರಂದು ಹಮ್ಮಿಕೊಂಡಿರುವ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ರಾಜ್ಯ ಬಿಜೆಪಿ ಅಧ್ಯಕ್ಷ ಹಾಗೂ ಶಿಕಾರಿಪುರದ ಶಾಸಕ ಬಿ ವೈ ವಿಜೇಯೇಂದ್ರ ಅವರನ್ನು ಜಿ.ಪಂ ಮಾಜಿ ಉಪಾಧ್ಯಕ್ಷ ಹರ್ಷಾ ಎಸ್ ಗುತ್ತೇದಾರ ಅವರು ಆಹ್ವಾನ ಪತ್ರಿಕೆ ನೀಡಿ ಆಹ್ವಾನಿಸಿದರು.**

**ಯುವ ಮಾರ್ಗ ಸುದ್ದಿ**

**ಆಳಂದ,ಆ.30–** ಪಟ್ಟಣದಲ್ಲಿ ಸೆ. 17ರಂದು ಹಮ್ಮಿಕೊಂಡಿರುವ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ರಾಜ್ಯ ಬಿಜೆಪಿ ಅಧ್ಯಕ್ಷ ಹಾಗೂ ಶಿಕಾರಿಪುರದ ಶಾಸಕ ಬಿ ವೈ ವಿಜೇಯೇಂದ್ರ ಆಗಮಿಸಲಿದ್ದಾರೆ.

ಈ ಕುರಿತು ಮಾಹಿತಿ ನೀಡಿರುವ ಜಿ.ಪಂ ಮಾಜಿ ಉಪಾಧ್ಯಕ್ಷ ಹರ್ಷಾ ಎಸ್ ಗುತ್ತೇದಾರ ಅವರು, ಸೆ. 17ರಂದು ಆಳಂದ ಪಟ್ಟಣದಲ್ಲಿ ನೂತನವಾಗಿ ನಿರ್ಮಿಸಿರುವ ಭಾರತೀಯ ಜನತಾ ಪಕ್ಷದ ಕಚೇರಿಯನ್ನು ಅಂದು ಬೆಳಿಗ್ಗೆ 11 ಗಂಟೆಗೆ ರಾಜ್ಯ ಬಿಜೆಪಿ ಅಧ್ಯಕ್ಷ ಬಿ ವೈ ವಿಜೇಯೇಂದ್ರ ಉದ್ಘಾಟಿಸಲಿದ್ದಾರೆ. ನಂತರ ಮಧ್ಯಾಹ್ನ ಆಳಂದ ಮಾಜಿ ಶಾಸಕರು ಹಾಗೂ ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ದಿ. ಅಣ್ಣಾರಾವ ವೀರಭದ್ರಪ್ಪ ಪಾಟೀಲ ಅವರ ಜನ್ಮಶತಮಾನೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಅದೇ ದಿನ ಸಾಯಂಕಾಲ ಆಳಂದ ಪಟ್ಟಣದ ಶ್ರೀರಾಮ ಮಾರುಕಟ್ಟೆ ಆವರಣದಲ್ಲಿ ಪ್ರತಿಷ್ಠಾಪಿಸಿರುವ ಹಿಂದೂ ಮಹಾಗಣಪತಿಯ ದಶಮಾನೋತ್ಸವ ಹಾಗೂ ಬೃಹತ ಹಿಂದೂ ಸಮಾವೇಶದಲ್ಲಿ ಭಾಗಿಯಾಗಿ ಮಾತನಾಡಲಿದ್ದಾರೆ. ಬೃಹತ ಹಿಂದೂ ಸಮಾವೇಶದಲ್ಲಿ ಗದಗನ ಜಗದ್ಗುರು ಸದಾಶಿವ ಮಹಾಸ್ವಾಮಿಗಳು ಆಶೀರ್ವಚನ ನೀಡಲಿದ್ದಾರೆ.

ಶನಿವಾರ ಬೆಂಗಳೂರಿನಲ್ಲಿ ತಾಲೂಕಿನ ನಿಯೋಗದ ಜೊತೆ ಭೇಟಿಯಾಗಿ ಆಹ್ವಾನ ಪತ್ರಿಕೆ ನೀಡಿ ಅವರನ್ನು ಆಹ್ವಾನಿಸಿದರು. ನಿಯೋಗದಲ್ಲಿ ಆಳಂದ ಮಂಡಲ ಬಿಜೆಪಿ ಅಧ್ಯಕ್ಷ ಮಲ್ಲಿಕಾರ್ಜುನ ಕಂದಗೂಳೆ, ಮುಖಂಡ ಮಹೇಶ ಗೌಳಿ, ಶಿವಪ್ರಕಾಶ ಹೀರಾ ಇದ್ದರು.

## ಸಿಎಂ ವಿರುದ್ಧ ಅವಹೇಳನಕಾರಿ ಸ್ಟೇಟಸ್: ಪಿಡಿಓ ವಿರುದ್ಧ ಎಫ್.ಐ.ಆರ್

ಕಲಬುರಗಿ,ಆ.30– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅವಹೇಳನ ಮಾಡುವ ಭಾಷಾ ಶೈಲಿ ಬಳಸಿ ವಾಟ್ಸಾಪ್ ಸ್ಟೇಟಸ್ ಇಟ್ಟ ಆರೋಪದ ಮೇರೆಗೆ ಆಳಂದ ತಾಲೂಕಿನ ಸುಂಟನೂರ ಗ್ರಾಮ ಪಂಚಾಯಿತಿ ಪಿಡಿಓ ವಿರುದ್ಧ ಎಫ್.ಐ.ಆರ್ ದಾಖಲಾಗಿದೆ.

ಸುಂಟನೂರು ಗ್ರಾಮ ಪಂಚಾಯತಿ ಪಿಡಿಓ ಪ್ರವೀಣ್ ಕುಮಾರ್ ಉಡುಗಿ ವಿರುದ್ಧ ನಿಂಬರ್ಗಾ ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್ ದಾಖಲಿಸಿಕೊಳ್ಳಲಾಗಿದೆ.

## ಗಣೇಶನ ಸನ್ನಿಧಿಯಲ್ಲಿ ರಸಪ್ರಶ್ನೆ ಸ್ಪರ್ಧೆ



**ಯುವ ಮಾರ್ಗ ಸುದ್ದಿ**

**ಅರಕೇರಾ,ಆ.30–** ಪಟ್ಟಣದ 4ನೇ ವಾರ್ಡ್ನ ಶ್ರೀ ಆಂಜಿನಯ್ಯ ದೇವಸ್ಥಾನದಲ್ಲಿ ಶ್ರೀ ಗಜಾನನ ಯುವ ಸಮಿತಿ ವತಿಯಿಂದ ಗೌರಿ ಗಣೇಶ ಹಬ್ಬದ ಪ್ರಯುಕ್ತ ರಸಪ್ರಶ್ನೆ ಸ್ಪರ್ಧೆ ಕಾರ್ಯಕ್ರಮವನ್ನು ಶನಿವಾರ ಹಮ್ಮಿಕೊಂಡಿದ್ದರು.

ಪಟ್ಟಣದ ಪ್ರಾಥಮಿಕ ಶಾಲೆ (05 ತಂಡ), ಪ್ರೌಢ ಶಾಲೆ (04 ತಂಡ) ವಿಭಾಗಗಳನ್ನಾಗಿ ವಿಂಗಡಿಸಿ, ಆಯೋಜನಕರು ಹನ್ನೆರಡು ಸುತ್ತುಗಳನ್ನು ನಡೆಸಿಕೊಟ್ಟರು. ಪ್ರೌಢ ಶಾಲೆ ವಿಭಾಗದಲ್ಲಿ ಸಬಾಪ್ರೌ ಶಾಲೆ 130 ಅಂಕ (ಪ್ರಥಮ), ಜಿಜಿಎಚ್‌ಎಸ್ 90 ಅಂಕ (ದ್ವಿತೀಯ), ಆದರ್ಶ ವಿದ್ಯಾಲಯ 70 ಅಂಕ (ತೃತೀಯಾ), ಸಮಾಹಿಪ್ರಾ ಶಾಲೆ 50 ಅಂಕ ಪಡೆದರು.

ಪ್ರಾಥಮಿಕ ಶಾಲೆ ವಿಭಾಗದಲ್ಲಿ ಎ.ವೆಂಕಟೇಶ ಕಿಪ್ರಾ ಶಾಲೆ 110 ಅಂಕ (ಪ್ರಥಮ), ಈರಲಕುಂಟಾ ಸಕಿಪ್ರಾ ಶಾಲೆ 80 ಅಂಕ (ದ್ವಿತೀಯ), ಸಮಾಹಿಪ್ರಾ ಶಾಲೆ 55 ಅಂಕ ಪಡೆದರು. ವಿಜೇತರಿಗೆ ಪ್ರಶಸ್ತಿ ವಿತರಣೆ ಮಾಡಲಾಯಿತು. ಶ್ರೀ ಗಜಾನನ ಯುವ ಸಮಿತಿ ಸದಸ್ಯರು ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು.

ಶಿಕ್ಷಕ ಮಂಜುನಾಥ ಪೂಜಾರಿ ಮಾತನಾಡಿ, ಗಣೇಶ ಉತ್ಸವ ಕುಣಿದು ಕುಪ್ಪಳಿಸುವುದು ಕಾಣುತ್ತೇವೆ. ವಿಭಿನ್ನ ಕಾರ್ಯಗಳಿಂದ ಜನರಿಗೆ, ವಿದ್ಯಾರ್ಥಿಗಳಿಗೆ ನೆರವಾಗಬೇಕು. ಶೈಕ್ಷಣಿಕ, ಸಾಮಾಜಿಕ ಕಾರ್ಯ ಮಾಡಬೇಕು. ಮಕ್ಕಳ ಬೌದ್ಧಿಕ ಮಟ್ಟ ಉತ್ತೇಜಿಸುವ ನಿಟ್ಟಿನಲ್ಲಿ ರಸಪ್ರಶ್ನೆ ಕಾರ್ಯಕ್ರಮ ಆಯೋಜಿಸಿರುವುದು ಉತ್ತಮ ಚಿಂತನೆ ಎಂದರು.

ಶಿಕ್ಷಕರಾದ ಮಹೇಶ ಸ್ವಾಮಿ, ಬಸವಲಿಂಗಯ್ಯ ಸ್ವಾಮಿ ಹಿರೇಮಠ, ಮಂಜುನಾಥ ಪೂಜಾರಿ, ಪ್ರದೀಪ ಕೊತ್ವಾಲ, ಚನ್ನಪ್ಪ ನಾಯಕ, ರೇಣುಕಾ, ಬುಡ್ಡಣ್ಣ ಕುಂಬಾರ, ರಮೇಶ ನಾಯಕ, ಅಭಿಮನ್ಯು ಗುರಿಕಾರ, ಪ್ರಮುಖರಾದ ಪ್ರಶಾಂತ ಸ್ವಾಮಿ, ವಿಜಯ ಮಹಾಂತೇಶ, ರಮೇಶ ಕುರುಕುಂದಿ, ಶಿವಕುಮಾರ ಗುಜುಪ್, ಮಹೇಶ ಸ್ವಾಮಿ, ನಿತೀಶ ಪತ್ತಾರ, ರಮೇಶ ಸ್ವಾಮಿ, ಶಿವಕುಮಾರ ಗುಡಿ ಇತರರಿದ್ದರು.

## ಸಿರವಾರ ಪಟ್ಟಣದ ಸರ್ವಾಂಗೀಣ ಅಭಿವೃದ್ಧಿಗಾಗಿ ಸಚಿವರಾದ ಬೋಸರಾಜು ಅವರ ಪ್ರಯತ್ನ

### ರೈತ ಸಂಘಟನೆಯವರ ಆರೋಪ ಸತ್ಯಕ್ಕೆ ದೂರ–ಚುಕ್ಕಿ ಶಿವಕುಮಾರ್

**ಯುವ ಮಾರ್ಗ ಸುದ್ದಿ**

**ಸಿರವಾರ, ಆ.30–**ಸಿರವಾರ ಪಟ್ಟಣದ ಸರ್ವಾಂಗೀಣ ಅಭಿವೃದ್ಧಿಗಾಗಿ ಸಾಕಷ್ಟು ಅನುದಾನ ತರುವ ಮೂಲಕ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ಅವರು ಸತತ ಪ್ರಯತ್ನ ಹಾಗೂ ಚಿಂತನೆ ಮಾಡುತ್ತಾರೆ ರೈತ ಸಂಘಟನೆಯ ಮುಖಂಡರು ಸಚಿವರ ಮೇಲೆ ಮಾಡಿರುವ ಆರೋಪಗಳು ಸತ್ಯಕ್ಕೆ ದೂರವಾಗಿದ್ದು ಎಂದು ಸಿರವಾರ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಚುಕ್ಕಿ ಶಿವಕುಮಾರ ಅವರು ಸ್ಪಷ್ಟನೆ ನೀಡಿದ್ದಾರೆ.

ಅವರು ಶುಕ್ರವಾರ ಪತ್ರಿಕಾ ಪ್ರಕಟಣೆ ನೀಡಿದ್ದು, ಸಚಿವರು ಸಿರವಾರ ಪಟ್ಟಣದ ದೇವದುರ್ಗ ಕ್ರಾಸ್ ರಸ್ತೆ ಕಾಮಗಾರಿ ಪರಿಶೀಲನೆಗಾಗಿಯೇ ಬಂದಿದ್ದು, ಹಾಗ ಅಲ್ಲಿ ಕೆಲ ರೈರ ಸಂಘಟನೆಯವರು ಎಷ್ಟಿಮೇಟ್ ಪ್ರಕಾರ ಕಾಮಗಾರಿ ಮಾಡಿಸಿ ಅಂತ ಹೇಳಿದಾಗ ಸಚಿವರು ನಮಗೆ ಗೊತ್ತಿದೆ ನೀವು ಹೇಳಿದರೆ ಆಗುತ್ತಾ ನಿಮ್ಮನ್ನ ಕೇಳಿ ನಾವು ರಸ್ತೆ ಕೆಲಸಕ್ಕೆ ಅನುದಾನ ಕೊಟ್ಟಿದಿವಾ..? ಹಿಂದೆ ಇದೆ ರಸ್ತೆ ಕಾಮಗಾರಿ ಮಾಡಿದ್ದಾರೆ ಅರ್ಧಕ್ಕೆ ನಿಂತಿದೆ ಆವಾಗ ಕೇಳಬೇಕಿತ್ತು ಜನರಿಗೆ ಏನೂ ಅನುಕೂಲವಾಗುವ ಕೆಲಸ ಮಾಡಬೇಕೋ ನಮಗೆ ಗೊತ್ತಿದೆ ಎಂದು ಸಚಿವರು ಹೇಳಿದ್ದಾರೆ ಇಷ್ಟಕ್ಕೂ ಈ ಸಂಘಟನೆಯವರು ಕಾಮಗಾರಿ ನಡೆಯುವಾಗ ಹಾಗೆ ಮಾಡಿ ಹೀಗೆ ಮಾಡಿ ಅಂತ ತೊಂದರೆ ನೀಡುತ್ತಿದ್ದು ಅಭಿವೃದ್ಧಿ ಕೆಲಸಗಳಿಗೆ ಅಡ್ಡಿ ಮಾಡುತ್ತಿರೋ ಇವರು ಸಚಿವರಾದ ಎನ್.ಎಸ್.ಬೋಸರಾಜು ಅವರ ಮೇಲೆ ಸುಳ್ಳು ಆರೋಪ ಮಾಡುತ್ತಿದ್ದಾರೆ ಎಂದು ಹೇಳಿದರು.



ಸಿರವಾರ ಪಟ್ಟಣದ ಮುಖ್ಯ ರಸ್ತೆಯ ಡಿವೈಡರ್, ಚರಂಡಿ, ರಸ್ತೆ ಡಾಂಬರೀಕರಣ ಕಾಮಗಾರಿ ವಿಸ್ತರಣೆ ಮಾಡಿದ್ದು 7 ಕೋಟಿ ರೂ. ನೀಡಲಾಗಿದೆ, ಸಿರವಾರ–ಮರಾಠ ಬಸ್ ಸಂಚಾರಕ್ಕೆ ಅನುಕೂಲವಾಗಲು ರಸ್ತೆ ಸುಧಾರಣಾ ಕಾಮಗಾರಿ ಮಾಡಲಾಗುತ್ತಿದೆ, ಸಿರವಾರ ಪಟ್ಟಣದ (ತಾಲೂಕ ಆಡಳಿತ ಕಟ್ಟಡ) ಪ್ರಜಾಸೌಧ ಹಾಗೂ ಯುವಕರ ಬಹುದಿನಗಳ ಕನಸ್ಸು ಆಗಿದ್ದ ತಾಲೂಕ ಕ್ರೀಡಾಂಗಣ ನಿರ್ಮಾಣದ ಕಾಮಗಾರಿಗಳಿಗೆ ಟೆಂಡರ್ ಆಗಿದ್ದು ನಮ್ಮ ನಾಯಕರು, ಸಚಿವರಾದ ಎನ್.ಎಸ್.ಬೋಸರಾಜು ಮತ್ತು ಶಾಸಕರಾದ ಜಿ.ಹಂಪಯ್ಯ ನಾಯಕ ಅವರು ಶೀಘ್ರ ಚಾಲನೆ ನೀಡಲಿದ್ದಾರೆ ಇದೆಲ್ಲವನ್ನು ಯಾರು ಕೇಳಿಲ್ಲ ಅವರೇ ಸ್ವಂತ ವಿವೇಚನೆಯಿಂದ ಸಿರವಾರ ಪಟ್ಟಣದ ಅಭಿವೃದ್ಧಿ ದೃಷ್ಟಿಯಿಂದ ಅನುದಾನ ನೀಡಿದ್ದಾರೆ, ಇಡೀ ಮಾನ್ವಿ ವಿಧಾನಸಭಾ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಯೇ ನಮ್ಮ ಸಚಿವರು ಮತ್ತು ಶಾಸಕರು ಹಗಲಿರುಳು ಶ್ರಮಿಸುತ್ತಿದ್ದಾರೆ ಎಂದು ಹೇಳಿದರು.

## ಸ್ಥಳಾಂತರಿಸುವಾಗ ತುಂಡಾದಬಳ್ಳಾರಿ ರಾಘವ ಪ್ರತಿಮೆ

**ಬಳ್ಳಾರಿ,ಆ.30–** ನಗರದ ಗಡಗಿ ಚೆನ್ನಪ್ಪ ವೃತ್ತದಲ್ಲಿದ್ದತೆಲುಗು ಮತ್ತು ಕನ್ನಡ ರಂಗಭೂಮಿಯ ದಿಗ್ಗಜ ಬಳ್ಳಾರಿ ರಾಘವರ ಪ್ರತಿಮೆ ಇಂದು ಸ್ಥಳಾಂತರಿಸುವಾಗ ತುಂಡಾಗಿದೆ.

ರಸ್ತೆಯ ಅಗಲೀಕರಣ ಕಾಮಗಾರಿ ನಡೆಯುತ್ತಿರುವ ಕಾರಣ ಈ ಪ್ರತಿಮೆಯನ್ನು ರಾಘವ ಕಲಾ ಮಂದಿರದ ಬಳಿ ಇಂದು ಸಂಜೆ ಗುತ್ತಿಗೆದಾರರು ಸ್ಥಳಾಂತರಿಸಲ ಮುಂದಾಗಿದ್ದರು. ಆದರೆ ಪ್ರತಿಮೆ ಎರೆಡು ತುಂಡಾಯಿತು.

**ಪ್ರತಿಮೆಯ ಇತಿಹಾಸ:**

ನಗರಸಭೆಯಲ್ಲಿ ಮೊದಲ ಬಾರಿಗೆ ಅಧಿಕಾರಕ್ಕೆ ಬಂದಿದ್ದ ಬಿಜೆಪಿಯ ಜನಾರ್ಧನರೆಡ್ಡಿ, ಶ್ರೀರಾಮುಲು ಗುಂಪು ರಾಘವರ ಪ್ರತಿಮೆಯನ್ನು 2003 ರಲ್ಲಿ ರಾತ್ರೋ ರಾತ್ರಿ ಪ್ರತಿಷ್ಟಾಪನೆ ಮಾಡಿತ್ತು. ಅಂದು ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರ್ಕಾರ ಕಾನೂನು ರೀತಿ ಸಾಕಷ್ಟು ವಿರೋಧ ಮಾಡಿತ್ತು. ಆದರೂ ಪಟ್ಟು ಹಿಡಿದು ಬಿಜೆಪಿಯವರು ಈ ಪ್ರತಿಮೆ ಸ್ಥಾಪನೆಯಲ್ಲಿ ಯಶ್ವಿಯಾದರು.

ರಾಘವರ ಜಯಂತಿ ದಿನ ರಂಗಭೂಮಿಕ್ಷೇತ್ರದ ಜನತೆ, ರಾಘವ ಮೆಮೋರಿಯಲ್ಲ ಅಸೋಸಿಯೇಷನ್ ಹೂಮಾಲೆ ಹಾಕಿ ನಮಿಸುತ್ತಿದ್ದರು.ರಾಘವನ ಹೆಸರಲ್ಲಿ ರಾಜ್ಯಮಟ್ಟದ ಪ್ರಶಸ್ತಿ ಸ್ಥಾಪಿಸುವುದಾಗಿ ಹೇಳಿದ್ದ ಜನಾರ್ಧನರೆಡ್ಡಿ ಮತ್ತವರ ಬಳಗ ಈ ವರಗೆ ಆ ಕೆಲಸ ಮಾಡಲಿಲ್ಲ.

**ಬಸ್ ನಿಲ್ದಾಣದ ಮುಂದೆ:**

ಈಗ ಇಲ್ಲಿ ರಸ್ತೆ ವಿಸ್ತರಣೆ ಕಾಮಗಾರಿ ನಡೆದಿರುವುದರಿಂದ ನಗರದ ಹಳೇ ಬಸ್ ನಿಲ್ದಾಣದ ಮುಂದೆ ರಾಘವರ ಕಂಚಿನ ಇಲ್ಲವೇ ಗ್ರಾನೈಟ್ ಪ್ರತಿಮೆ ಸ್ಥಾಪಿಸುವುದಾಗಿ ನಗರದ ಶಾಸಕರು ಬಳ್ಳಾರಿ ರಾಘವ ಮೆಮೋರಿಯಲ್ ಅಸೋಸಿಯೇಷನ್ ಗೆ ಭರವಶೆ ನೀಡಿದ್ದಾರಂತೆ.



ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ

9743497111 9743496111

## ಪ್ರವಾಸೋದ್ಯಮ ಇಲಾಖೆಯಿಂದ ತರಬೇತಿಗೆ ಅರ್ಜಿ ಆಹ್ವಾನ

**ರಾಯಚೂರು,ಆ.30–** ಇಲ್ಲಿನ ಪ್ರವಾಸೋದ್ಯಮ ಇಲಾಖೆಯಿಂದ 2024–25ನೇ ಸಾಲಿನ ಜಿಲ್ಲೆಯ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ವರ್ಗಕ್ಕೆ ಸೇರಿದ ವಿದ್ಯಾವಂತ ನಿರುದ್ಯೋಗಿ ಅಭ್ಯರ್ಥಿಗಳಿಗೆ ಪ್ರವಾಸೋದ್ಯಮ ಅತಿಥ್ಯ ಕ್ಷೇತ್ರದಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲು ಅರ್ಹ ಅಭ್ಯರ್ಥಿಗಳಿಂದ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ.

ತರಬೇತಿಯಲ್ಲಿ ಆಹಾರ ಮತ್ತು ಪಾನೀಯ ಸೇವಾ ಸ್ಟೀವರ್ಡ್ಗೆ ಕನಿಷ್ಠ 10ನೇ ತರಗತಿ ಪಾಸ್ ಆಗಿರುವ 20 ರಿಂದ 45 ವರ್ಷಗಳೊಗಿರಬೇಕು. 15 ವಾರಗಳ ಕಾಲ ತರಬೇತಿ ನೀಡಲಾಗುವುದು.

ಕೊಠಡಿ ಪರಿಚಾರಕ ತರಬೇತಿಗೆ ಕನಿಷ್ಠ 5ನೇ ತರಗತಿ ಪಾಸ್ ಆಗಿರುವ ಪಾಸ್ ಆಗಿರುವ 20 ರಿಂದ 45 ವರ್ಷಗಳೊಗಿರಬೇಕು. 15 ವಾರಗಳ ಕಾಲ ತರಬೇತಿ ನೀಡಲಾಗುವುದು.

ಫ್ರಂಟ್ ಆಫೀಸ್ ಅಸೋಸಿಯೇಟ್ ತರಬೇತಿಗೆ ಕನಿಷ್ಠ 12ನೇ ತರಗತಿ ಪಾಸ್ ಆಗಿರುವ 20 ರಿಂದ 45 ವರ್ಷಗಳೊಗಿರಬೇಕು. 20 ವಾರಗಳ ಕಾಲ ತರಬೇತಿ ನೀಡಲಾಗುವುದು.

ಮಲ್ಟಿ ಕಸಿನ್ ಕುಕ್ ತರಬೇತಿಗೆ 8ನೇ ತರಗತಿ ಪಾಸ್ ಆಗಿರುವ 20 ರಿಂದ 45 ವರ್ಷಗಳೊಗಿರಬೇಕು. 20 ವಾರಗಳ ಕಾಲ ತರಬೇತಿ ನೀಡಲಾಗುವುದು.

ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯೋಜನೆ ಅಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಪ್ರವಾಸೋದ್ಯಮ/ಅತಿಥ್ಯ ಕ್ಷೇತ್ರದಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿಗೆ ಆಸಕ್ತರು ಸೆ.11ರೊಳಗಾಗಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಶ್ರೀ ನಜೀರಅಮದ ಕನವಳ್ಳಿ, ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಗಣೇಶ ಗುಡಿ ಹತ್ತಿರ ನಿಜಲಿಂಗಪ್ಪ ಕಾಲೋನಿ, ರಾಯಚೂರು–584101 ದೂರವಾಣಿ ಸಂಖ್ಯೆ: 08532–200677 ಕಛೇರಿಗೆ ಕರ್ತವ್ಯದ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಾಜಿ ಸಚಿವ ರೇಣುಕಾಚಾರ್ಯ ವಿರುದ್ಧ ಎಫ್ಐಆರ್



**ಬೆಂಗಳೂರು,ಆ.30–** ಗಣೇಶ ಉತ್ಸವದ ಸಂದರ್ಭದಲ್ಲಿ ಡಿಜೆ ಅನುಮತಿಗಾಗಿ ರಸ್ತೆತಡೆ ನಡೆಸಿ ಧರಣಿ ನಡೆಸಿದ ಹಿನ್ನೆಲೆಯಲ್ಲಿ ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ವಿರುದ್ಧ ಎಫ್ಐಆರ್ ದಾಖಲಾಗಿದೆ.ಆಗಸ್ಟ್ 23ರಂದು ದಾವಣಗೆರೆಯ ಜಯದೇವ ವೃತ್ತದಲ್ಲಿ ರೇಣುಕಾಚಾರ್ಯ ಅವರು ರಸ್ತೆ ತಡೆ ನಡೆಸಿ ಧರಣಿ ನಡೆಸಿದ್ದರು. ಈ ವೇಳೆ ಪ್ರಚೋದನಕಾರಿ ಹೇಳಿಕೆ ನೀಡಿ, ಡಿಸಿ ಆದೇಶ ಉಲ್ಲಂಘನೆ ಮಾಡಿದ್ದರು. ಈ ಹಿನ್ನೆಲೆಯಲ್ಲಿ ದಾವಣಗೆರೆ ಬಡಾವಣೆ ಪೊಲೀಸ್ ಠಾಣೆಯಲ್ಲಿ ಅವರ ವಿರುದ್ಧ ಎಫ್ಐಆರ್ ದಾಖಲಿಸಲಾಗಿದೆ.

ದಾವಣಗೆರೆ ಡಿಸಿ ಡಾ.ಗಂಗಾಧರ ಸ್ವಾಮಿ ಅವರು ಯಾವುದೇ ಕಾರಣಕ್ಕೂ ಡಿಜೆಗೆ ಅನುಮತಿ ಇಲ್ಲ ಎಂದಿದ್ದರು. ದಾವಣಗೆರೆ ಗಣೇಶ ಉತ್ಸವ ಸಮಿತಿ ಪದಾಧಿಕಾರಿಗಳು, ಡಿಜೆ ಮಾಲೀಕರು ಡಿಜೆಗೆ ಅನುಮತಿ ಕೇಳಿದ್ದರು. ಆದರೆ ಜಿಲ್ಲಾಧಿಕಾರಿಯವರ ಡಿಜೆಗೆ ಮನವಿ ಕೊಡುವುದಿಲ್ಲ ಎಂದು ಸ್ಪಷ್ಟನೆ ಪಡಿಸಿದ್ದರು.

ಡಿಜೆ ಮಾಲೀಕರು, ಗಣೇಶ ಆಯೋಜಕರು ನಗರದ ಹಳೆ ಪ್ರವಾಸಿ ಮಂದಿರದಲ್ಲಿ ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ನೇತೃತ್ವದಲ್ಲಿ ಸಭೆ ಸೇರಿ, ಡಿಜೆಗೆ ಅವಕಾಶ ಕೊಡುವಂತೆ ಪ್ರತಿಭಟನೆ ಮಾಡಿ ಜಿಲ್ಲಾಡಳಿತಕ್ಕೆ ಮನವಿ ಮಾಡಿದ್ದರು. ಡಿಜೆಗೆ ಅವಕಾಶ ಕೊಡುವಂತೆ ಪ್ರತಿಭಟನೆ ಮಾಡಿ ಜಿಲ್ಲಾಡಳಿತಕ್ಕೆ ಮನವಿ ಮಾಡಿ ಜಿಲ್ಲಾಧಿಕಾರಿ ಮತ್ತು ಎಸ್ಪಿ ಸ್ಥಳಕ್ಕೆ ಬರುವಂತೆ ಒತ್ತಾಯಿಸಿದ್ದರು.ಈ ವೇಳೆ ಜಿಲ್ಲಾಡಳಿತ ಸ್ಪಂದಿಸದ ಹಿನ್ನೆಲೆಯಲ್ಲಿ ರೊಚ್ಚಿಗೆದ್ದ ಪ್ರತಿಭಟನಾನಿರತರು ಎಂ.ಪಿ.ರೇಣುಕಾಚಾರ್ಯ ನೇತೃತ್ವದಲ್ಲಿ ರಸ್ತೆತಡೆ ನಡೆಸಲು ಮುಂದಾಗಿದ್ದರು.

ಜಿಲ್ಲಾಡಳಿತ ಜಗ್ಗದೇ ಇದ್ದಾಗ ಅವಕಾಶ ಕೊಡದೇ ಇದ್ದರೂ ನಾವು ಡಿಜೆ ಬಳಸುತ್ತೆ?ವೆ, ಏನ್ ಮಾಡ್ತಿ?ರಾ, ಮಾಡಿ ಎಂದು ರೇಣುಕಾಚಾರ್ಯ ಜಿಲ್ಲಾಡಳಿತಕ್ಕೆ ಸವಾಲು ಹಾಕಿದ್ದರು. ಸರ್ಕಾರದ ಮಟ್ಟದಲ್ಲೆ ಡಿಜೆ ನಿಷೇಧಿಸಿದ್ದು, ಬಿಜೆಪಿ ನಾಯಕರು ಆಡಳಿತ ಪಕ್ಷದ ಮೇಲೆ ಮುಗಿಬಿದ್ದಿದ್ದಾರೆ. ಡಿಜೆಗೆ ಅವಕಾಶ ಕೊಡುವಂತೆ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾ ಮಾಡಿದೆ. ಅಲ್ಲದೇ ಹಗಲು ವೇಳೆ ಜನವಸತಿ ಪ್ರದೇಶದಲ್ಲಿ 55 ಡೆಸಿಬಲ್ ಮತ್ತು ರಾತ್ರಿ ವೇಳೆ 45 ಡೆಸಿಬಲ್ ಶಬ್ದ ಮಟ್ಟಕ್ಕೆ ನಿರ್ಬಂಧಿಸಿ ಆದೇಶ ಹೊರಡಿಸಿದೆ.

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H